# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಮಾರ್ಚ್ 11, 2021

ಸಂಪುಟ : 47 ಸಂಚಿಕೆ : 311 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




**ಶಿವರಾತ್ರಿಗೆ ಹಣ್ಣು ಖರೀದಿ** ಶಿವರಾತ್ರಿ ಹಿನ್ನೆಲೆಯಲ್ಲಿ ದಾವಣಗೆರೆ ನಗರದ ಮಾರುಕಟ್ಟೆಯಲ್ಲಿ ಜನತೆ ವಿವಿಧ ಬಗೆಯ ಹಣ್ಣುಗಳ ಖರೀದಿಯಲ್ಲಿ ಮಗ್ನರಾಗಿದ್ದರು. ಗ್ರಾಹಕನೊಬ್ಬ ಕಲ್ಲಂಗಡಿ ಹಣ್ಣು ಖರೀದಿಸಲು ತೂಕ ಮಾಡಿಸುತ್ತಿರುವ ದೃಶ್ಯ.

# ಮೀಸಲಾತಿ ಹೆಚ್ಚಳ ಇಂಗಿತ

## ವಿವಿಧ ಸಮುದಾಯಗಳ ಬೇಡಿಕೆ ಹಿನ್ನೆಲೆಯಲ್ಲಿ ಕ್ರಮಕ್ಕೆ ನಿರ್ಧಾರ

ಬೆಂಗಳೂರು, ಮಾ. 10 - ರಾಜ್ಯದಲ್ಲಿರುವ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡುವ ಇಂಗಿತವನ್ನು ಕಾನೂನು ಮತ್ತು ಗೃಹ ಸಚಿವ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ.

ಹೆಚ್ಚು ಮೀಸಲಾತಿಗಾಗಿ ಹಲವು ಸಮುದಾಯಗಳು ಬೇಡಿಕೆ ಇಟ್ಟಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆ.

ರಾಜ್ಯದಲ್ಲಿ ಪ್ರಸಕ್ತ ಒಟ್ಟಾರೆ ಶೇ. 50ರಷ್ಟು ಮೀಸಲಾತಿ ಇದ್ದು, ಬೇಡಿಕೆಗಳನ್ನು ಈಡೇರಿಸಲು ಮೀಸಲಾತಿ ಪ್ರಮಾಣ ಹೆಚ್ಚಿಸುವ ಅಗತ್ಯವಿದೆ. ಇದೇ ಉದೇಶಕ್ಕಾಗಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಧ್ಯಕ್ಷತೆಯಲ್ಲಿ, ಮೂವರು ಸದಸ್ಯರ ಸಮಿತಿ ರಚಿಸಲಾಗಿದೆ.

ಇದಕ್ಕೆ ಪೂರಕವಾಗುವಂತೆ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಅಗತ್ಯವಿದೆಯೇ ಎಂದು ಸರ್ವೋಚ್ಚ ನ್ಯಾಯಾಲಯ ರಾಜ್ಯಗಳನ್ನು ಕೇಳಿರುವ ಬೆಳವಣಿಗೆ ಆಶಾದಾಯಕ ಎಂದು ಬೊಮ್ಮಾಯಿ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿಂದು ಶೂನ್ಯ ವೇಳೆಯಲ್ಲಿ ಬಿಜೆಪಿ ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಪಂಚಮಸಾಲಿ ಸಮುದಾಯ ತನಗೆ ಪ್ರವರ್ಗ 2ಎ ಮೀಸಲಾತಿ ನೀಡಬೇಕು ಎಂದು ಮನವಿ ಮಾಡಿದೆ. ಕುರುಬ ಸಮುದಾಯ ತನ್ನನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಒತ್ತಾಯಿಸಿದೆ. ಒಕ್ಕಲಿಗ ಸಮುದಾಯ ತಮಗಿರುವ ಮೀಸಲಾತಿ ಪ್ರಮಾಣವನ್ನು ನಾಲ್ಕರಿಂದ 10ಕ್ಕೆ ಏರಿಸುವಂತೆ ಕೋರಿದೆ. ಇದೇ ರೀತಿ ಮತ್ತಿತರೆ ಸಮುದಾಯಗಳು (2ನೇ ಪುಟಕ್ಕೆ)

> **ಸುಪ್ರೀಂ ಕೋರ್ಟ್‌ನ ಸಲಹೆಯನ್ನು ಆಧಾರವಾಗಿಟ್ಟುಕೊಂಡು ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಎಲ್ಲಾ ಆಯಾಮಗಳನ್ನು ಪರಿಶೀಲಿಸಿ ವರದಿ ಸಿದ್ಧಪಡಿಸುವ ಉದ್ದೇಶದಿಂದಲೇ ಸಮಿತಿ ರಚನೆ ಮಾಡಲಾಗಿದೆ. ಸಮಿತಿಯ ವರದಿ ಬಂದ ನಂತರ ಸುಪ್ರೀಂ ಕೋರ್ಟ್‌ಗೆ ರಾಜ್ಯದ ಮನವಿ ಸಲ್ಲಿಸಿ, ಬೇಡಿಕೆಗಳಿಗೆ ಮನ್ನಣೆ ನೀಡಲು ಸರ್ಕಾರ ಪ್ರಯತ್ನ ಮಾಡಲಿದೆ**
>
> **- ಬಸವರಾಜ ಬೊಮ್ಮಾಯಿ**

### ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದಲ್ಲಿ ಮೀಸಲಾತಿ ಸಮಿತಿ

ಬೆಂಗಳೂರು, ಮಾ. 10 - ವಿವಿಧ ಸಮುದಾಯಗಳು ಮೀಸಲಾತಿ ಬೇಡಿಕೆಗಳನ್ನು ಮುಂದಿಡುತ್ತಿರುವ ಹಿನ್ನೆಲೆಯಲ್ಲಿ, ನ್ಯಾಯಿಕ ಸಮಿತಿ ರಚಿಸುವುದಾಗಿ ಈ ಹಿಂದೆ ಘೋಷಿಸಿದ್ದ ರಾಜ್ಯ ಸರ್ಕಾರ, ಈಗ ಸಮಿತಿಯ ಸದಸ್ಯರ ಹೆಸರುಗಳನ್ನು ಪ್ರಕಟಿಸಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಆಡಿ ಅವರು ಸಮಿತಿಯ ಮುಖ್ಯಸ್ಥರಾಗಿರಲಿದ್ದಾರೆ.

ಮಾಜಿ ಮುಖ್ಯ ಕಾರ್ಯದರ್ಶಿ ಕೆ.ರತ್ನಪ್ರಭಾ, ಮಹಾರಾಣಿ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಬಿ.ವಿ ವಸಂತ್ ಕುಮಾರ್ ಸಮಿತಿ ಸದಸ್ಯರಾಗಿದ್ದಾರೆ. ಸಮಿತಿಗೆ ಮೀಸಲಾತಿ ಅಧ್ಯಯನಕ್ಕೆ ಸಮಯಾವಕಾಶ ನಿಗದಿ ಮಾಡಿಲ್ಲ. ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಸಮಿತಿ ರಚಿಸಲಾಗಿದೆ. ಪಂಚಮಸಾಲಿ ಸಮುದಾಯದ 2ಎ ಮೀಸಲಾತಿ ಕೇಳುತ್ತಿದ್ದರೆ, ಕುರುಬ (2ನೇ ಪುಟಕ್ಕೆ)

# ಭತ್ತ ಕಟಾವಿಗೆ ಬರುವ ತನಕ ಜೊತೆ ಇರುವೆ

## ಕೊನೆ ಭಾಗದ ರೈತರಿಗೆ ಭರವಸೆ ನೀಡಿದ ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ



ಕೊನೆ ಭಾಗದ ರೈತರಿಗೆ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತಿರುವ ಪವಿತ್ರ ರಾಮಯ್ಯ ಅವರಿಗೆ 'ಮಡಲಕ್ಕಿ' ಹಾಕುವ ಮೂಲಕ ರೈತರು ಅಭಿನಂದಿಸಿದರು.

ಮಲೇಬೆನ್ನೂರು, ಮಾ.10- ಭದ್ರಾ ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ ಅವರು ಭದ್ರಾ ಅಚ್ಚುಕಟ್ಟಿನ ಕೊನೆ ಭಾಗಗಳಿಗೆ ಭೇಟಿ ನೀಡಿ, ನೀರು ನಿರ್ವಹಣೆ ಕುರಿತು ರೈತರ ಸಮಸ್ಯೆಗಳನ್ನು ಆಲಿಸಿದರು.

ಮೊದಲಿಗೆ ಭದ್ರಾ ನಾಲಾ ನಂ-3 ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಕೆ.ಎನ್. ಹಳ್ಳಿ, ಪಾಳ್ಯ, ಹೊಳೆ ಸಿರಿಗೆರೆ ಗ್ರಾಮಗಳ ರೈತರಿಗೆ ನೀರು ಪೂರೈಸುವ 14ನೇ ಕಾಲುವೆಯ ಕೊನೆ ಭಾಗಕ್ಕೆ ತೆರಳಿದ ಅವರನ್ನು ರೈತರು ಅಭಿನಂದಿಸಿದರು.

ಫೆಬ್ರವರಿ ತಿಂಗಳಲ್ಲೇ ನಾವು ನಾಟಿ ಮಾಡಲು ನೀರನ್ನು ಸಮರ್ಪಕವಾಗಿ ಪೂರೈಸಿದ ಮತ್ತು ಕೊನೆ ಭಾಗಕ್ಕೆ ಭೇಟಿ ನೀಡಿ ರೈತರ ಕಷ್ಟ-ಸುಖ ಆಲಿಸಿದ ಮೊದಲ ಕಾಡಾ ಅಧ್ಯಕ್ಷರು ನೀವು ಎಂದು ರೈತರು ಪವಿತ್ರಾ ಅವರನ್ನು ಕೊಂಡಾಡಿದರು.

ಈ ಸಂದರ್ಭದಲ್ಲಿ ಪಾಳ್ಯ ನಂದಿಗೌಡ, ಕುಬೇರಗೌಡ ಅವರು ಕಾಲುವೆಗಳಲ್ಲಿ ನೀರು ನಿರಂತರವಾಗಿ ನಿಗದಿತ ಮಟ್ಟದಲ್ಲಿ ಹರಿಯುತ್ತಿಲ್ಲ. ಹಾಗಾಗಿ ಅವಧಿಯ ಕೊನೆಯಲ್ಲಿ ನೀರಿನ ತೊಂದರೆ ಆಗುತ್ತಿದೆ ಎಂದಾಗ ಇದಕ್ಕೆ ದನಿಗೂಡಿಸಿದ ಹೊಳೆ ಸಿರಿಗೆರೆಯ ತಿಪ್ಪೇರುದ್ರಪ್ಪ ಅವರು ಬಸವಾಪಟ್ಟಣ ಸಮೀಪದ R2 ನಲ್ಲಿ 3.11 ಇರಬೇಕಾದ ನೀರಿನ ಗೇಜ್ 3.8 ಕ್ಕೆ ಇಳಿಕೆ ಮಾಡಿದ್ದಾರೆ. ಇದರಿಂದ ಕೊನೆ ಭಾಗಕ್ಕೆ ನೀರಿನ ಹರಿವು ಕಡಿಮೆ ಆಗಿದೆ ಎಂದರು. ತಕ್ಷಣ ಭದ್ರಾ ಅಧೀಕ್ಷಕ ಅಭಿಯಂತರ ಯತೀಶ್‌ಚಂದ್ರ ಅವರಿಗೆ ಫೋನ್ ಮಾಡಿದ ಪವಿತ್ರ ರಾಮಯ್ಯ ಅವರು (2ನೇ ಪುಟಕ್ಕೆ)

# ಲಸಿಕೆಯಲ್ಲಿ ಶೇ.1ಕ್ಕೂ ಕಡಿಮೆ ಗುರಿ ಸಾಧನೆ

## ಯುದ್ಧೋಪಾದಿಯಲ್ಲಿ ಲಸಿಕಾ ಅಭಿಯಾನ ಕೈಗೊಳ್ಳಲು ನಿರ್ಧಾರ : ಡಿಸಿ

ದಾವಣಗೆರೆ, ಮಾ. 10 – 45 ವರ್ಷ ಮೇಲ್ಪಟ್ಟ ಸಹ ಅಸ್ವಸ್ಥತೆ ಉಳ್ಳವರು ಹಾಗೂ 60 ವರ್ಷ ಮೀರಿದವರಿಗೆ ಮಾರ್ಚ್ 1ರಿಂದ ಲಸಿಕೆ ನೀಡಲಾಗುತ್ತಿದ್ದರೂ ಸಹ, ಜಿಲ್ಲೆಯಲ್ಲಿ ಇದುವರೆಗೂ ಶೇ.1ರಷ್ಟೂ ಜನ ಲಸಿಕೆ ಪಡೆದಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಈ ಎರಡೂ ಗುಂಪಿಗೆ ಸೇರಿದ 1.60 ಲಕ್ಷ ಜನರಿದ್ದಾರೆ. ಆದರೆ, ಇದುವರೆಗೂ 1,315 ಜನ ಮಾತ್ರ ಲಸಿಕೆ ಪಡೆದಿದ್ದಾರೆ ಎಂದು ಹೇಳಿದ್ದಾರೆ.

ರಾಜ್ಯ ಅಪರ ಮುಖ್ಯ ಕಾರ್ಯದರ್ಶಿ ಆರೋಗ್ಯ ಇಲಾಖೆ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಬುಧವಾರ ವಿಡಿಯೋ ಕಾನ್ಫರೆನ್ಸ್ (2ನೇ ಪುಟಕ್ಕೆ)


**ಸಾಲ ಸೌಲಭ್ಯ**

ಮಾರ್ಕ್ಸ್ ಕಾರ್ಡ್, ಪ್ರಾಪರ್ಟಿ, ಪರ್ಸನಲ್ ಪ್ರಾಜೆಕ್ಟ್ ಮೇಲೆ ವಾರ್ಷಿಕ ಶೇ. 2ರ ಬಡ್ಡಿ ದರದಲ್ಲಿ ಸಬ್ಸಿಡಿ ಸಾಲವನ್ನು ಕೊಡಲಾಗುತ್ತದೆ. ಏಜೆಂಟರಿಗೆ ಅವಕಾಶವಿದೆ. ಆಸಕ್ತರು ಇದರ ಸದಾವಕಾಶವನ್ನು ಪಡೆದುಕೊಳ್ಳಲು ಕೂಡಲೇ ಸಂಪರ್ಕಿಸಿ

**63604 56791**


## ನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ



ದಾವಣಗೆರೆ, ಮಾ. 10- ಮಹಾನಗರ ಪಾಲಿಕೆ ಮೇಯರ್ ಎಸ್.ಟಿ ವೀರೇಶ್ ಅಧ್ಯಕ್ಷತೆಯಲ್ಲಿ ಪಾಲಿಕೆಯ 4 ಸಮಿತಿಗಳ ಅಧ್ಯಕ್ಷರುಗಳನ್ನು ಆಯ್ಕೆ ಮಾಡಲಾಯಿತು.

ತೆರಿಗೆ ನಿರ್ವಹಣೆ ಮತ್ತು ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಶ್ರೀಮತಿ ರೇಣುಕಾ ಶ್ರೀನಿವಾಸ್, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ (2ನೇ ಪುಟಕ್ಕೆ)

## ಫೈನ್ ಆರ್ಟ್ಸ್ ಕಾಲೇಜು ಜಾಗದಲ್ಲಿ ವಸತಿ ಗೃಹ: ಪುನರ್ ಪರಿಶೀಲನೆ

ಬೆಂಗಳೂರು, ಮಾ. 10- ದಾವಣಗೆರೆ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ವಸತಿ ಗೃಹಗಳನ್ನು ನಿರ್ಮಿಸಲು 4.31 ಎಕರೆ ಪ್ರದೇಶವನ್ನು ಕಾಯ್ದಿರಿಸಿ ಅನುಮೋದನೆ ನೀಡಲಾಗಿದೆ. ಆದರೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಪ್ರಕರಣವನ್ನು ಪುನರ್ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು (2ನೇ ಪುಟಕ್ಕೆ)


**ಬಿಂದಪ್ಪ ಶ್ರೀಮತಿ ಸುಲೋಚನಮ್ಮ ನಿಧನ**



ದಾವಣಗೆರೆ ನಗರದ ಎಂ.ಸಿ.ಸಿ. 'ಎ' ಬ್ಲಾಕ್ ವಾಸಿ,
ಶಾಮನೂರು ದಿ|| ಬಿಂದಪ್ಪ ಸಿದ್ದಪ್ಪನವರ ಧರ್ಮಪತ್ನಿ

**ಶ್ರೀಮತಿ ಸುಲೋಚನಮ್ಮ ಬಿಂದಪ್ಪ ಸಿದ್ದಪ್ಪ**

ಅವರು ದಿನಾಂಕ 10.03.2021ರ ಬುಧವಾರ ಬೆಳಿಗ್ಗೆ 10.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.03.2021ರ ಬುಧವಾರ ಸಂಜೆ 4.30 ಕ್ಕೆ ಶಾಮನೂರು ಗ್ಲಾಸ್ ಹೌಸ್ ಸಮೀಪದಲ್ಲಿರುವ ಅವರ ಜಮೀನಿನಲ್ಲಿ ನೆರವೇರಿಸಲಾಯಿತು.

– ದುಃಖತಪ್ತ ಕುಟುಂಬ ವರ್ಗ

ಸಹೋದರರಾದ ✦ ಕೆ. ಜಿ. ಬಸವನಗೌಡ್ರು, ಮಾಜಿ ಜಿ.ಪಂ. ಸದಸ್ಯರು, ದಾವಣಗೆರೆ.
✦ ಕೆ. ಜಿ. ವೀರಬಸಪ್ಪ, ಕಕ್ಕರಗೊಳ್ಳ ✦ ಹಳ್ಳೇರ ಪರಮೇಶ್ವರಪ್ಪ, ಶಾಮನೂರು

**ಗೌಡ್ರು ಮನೆತನದವರು, ಕಕ್ಕರಗೊಳ್ಳ.**
**ಬಿಂದಪ್ಪ ಮನೆತನದವರು, ಶಾಮನೂರು.**

ಮೊ. : 99025 69999, ಫೋ. : 08192-226321



**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

|| ಶ್ರೀ ಕುರುವತ್ತಿ ಬಸವೇಶ್ವರ ಪ್ರಸನ್ನ ||





ಶಿವ

ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ
ದಿ|| ಶ್ರೀಮತಿ ಗೌರಮ್ಮ ಮತ್ತು ಮಾಳಿಗೇರ ಚನ್ನಪ್ಪನವರ ಮಕ್ಕಳಾದ
**ಶ್ರೀ ಎಂ.ಸಿ. ಕಾಂತಬಸಪ್ಪ ಮತ್ತು ಸಹೋದರರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 08-03-2021 ನೇ ಸೋಮವಾರ ರಾತ್ರಿ 8-00ಕ್ಕೆ ನಮ್ಮ ಸಹೋದರನಾದ



ಜನನ : 19-04-1954

ನಿಧನ : 08-03-2021

**ಶರಣ ಮಾಳಿಗೇರ ಎಂ. ನಾಗಬಸಪ್ಪನವರು**

ಎ.ಪಿ.ಎಂ.ಸಿ. ವರ್ತಕರು, ದಾವಣಗೆರೆ.
ಶಿವಸಾಯುಜ್ಯ ಹೊಂದಿದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 12-03-2021ನೇ ಶುಕ್ರವಾರ ಬೆಳಗ್ಗೆ 10-00 ಗಂಟೆಗೆ ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು,

ಧರ್ಮಪತ್ನಿಯರಾದ : ಮಾಳಿಗೇರ ಶ್ರೀಮತಿ ಮಂಜುಳ, ಶ್ರೀಮತಿ ಗೀತಾ
ಮಕ್ಕಳಾದ : ಶ್ರೀಮತಿ ಶುಭ, ಶ್ರೀ ಎಂ.ಎನ್. ಬಸವರಾಜ ಮತ್ತು ಚಿ|| ಎಂ.ಎನ್. ಶಶಿಧರ್
ಶ್ರೀಮತಿ ರೂಪ, ಶ್ರೀ ಶಶಿಧರ್ ಮುಚುಡಿ, ರಾಣೇಬೆನ್ನೂರು.
ಕು|| ಭೂಮಿಕಾ ಎಂ.ಎನ್. ಮತ್ತು ಕು|| ಜಲಜ ಎಂ.ಎನ್. ಮಾಳಗೇರ ವಂಶಸ್ಥರು, ಎಲೆಬೇತೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ. : 81232 97117, 9916581999

**ಎಂ. ನಾಗಬಸಪ್ಪ ಮರ್ಚಂಟ್ ಅಂಡ್ ಕಮೀಷನ್ ಏಜೆಂಟ್**
ಎ.ಪಿ.ಎಂ.ಸಿ. ಯಾರ್ಡ್, ದಾವಣಗೆರೆ. ಮೊ. : 94801 76598

ವಿ.ಸೂ. : ಆಹ್ವಾನ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಮೀಸಲಾತಿ ಹೆಚ್ಚಳ ಇಂಗಿತ

**(1ನೇ ಪುಟದಿಂದ)** ಮೀಸಲಾತಿಗಾಗಿ ಸರ್ಕಾರದ ಮುಂದೆ ಅರ್ಜಿ ಸಲ್ಲಿಸಿವೆ ಎಂದಿದ್ದಾರೆ.

ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮಾಜದ ವಿದ್ಯಾವಂತರು ತಮ್ಮ ಸಮುದಾಯಗಳಿಗೂ ಮೀಸಲಾತಿ ದೊರಕಬೇಕಾಗಿದೆ, ಇದರಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ನಮ್ಮ ಸಮಾಜಕ್ಕೂ ಸೌಲಭ್ಯ ದೊರೆಯಬೇಕು ಎಂಬ ಕೂಗು ಕೇಳಿಬಂದಿದೆ. ಏಳು ದಶಕಗಳ ಹಿಂದೆ ನಿಗದಿಗೊಂಡ ಮೀಸಲಾತಿಯಲ್ಲಿ ನಾವು ವಂಚಿತರಾಗಿದ್ದೇವೆ, ನಮಗೆ ದಕ್ಕಬೇಕಾದ ಅವಕಾಶವನ್ನು ನೀಡಿ ಎಂದು ಕೇಳುವುದರಲ್ಲಿ ತಪ್ಪಿಲ್ಲ ಎಂದು ಬೊಮ್ಮಾಯಿ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳನ್ನು ಸದನದ ಮುಂದಿಟ್ಟ ಬೊಮ್ಮಾಯಿ, ಮೀಸಲಾತಿ ನೀಡುವ ಅಧಿಕಾರ ನಮಗಿಲ್ಲ. ರಾಜ್ಯಕ್ಕೆ ಈಗಾಗಲೇ ಶೇ. 50ರಷ್ಟು ನಿಗದಿಯಾಗಿದೆ, ಅದರಲ್ಲೇ ನಾವು ಎಲ್ಲಾ ಸಮುದಾಯಗಳಿಗೆ ಮೀಸಲಾತಿ ಹಂಚಿದ್ದೇವೆ. ಈಗ ಬೇಡಿಕೆ ಹೆಚ್ಚಿದೆ, ಆ ಸಮುದಾಯಗಳಿಗೆ ಮಿಸಲಾತಿ ಕಲ್ಪಿಸುವ ಅಗತ್ಯವೂ ಇದೆ ಎಂದು ಹೇಳಿದ್ದಾರೆ.

ಮೀಸಲಾತಿ ಪ್ರಮಾಣ ಸಂವಿಧಾನಬದ್ಧವಾಗಿ ಹೆಚ್ಚಳವಾದರೆ ಈಗಿನ ಬೇಡಿಕೆಗಳಿಗೆ ಪೂರಕವಾಗಿ ಮೀಸಲಾತಿ ಒದಗಿಸಲು ಸಾಧ್ಯ ಎಂದವರು ಅಭಿಪ್ರಾಯಪಟ್ಟರು.

ಮೀಸಲಾತಿ ಒದಗಿಸಿದ ಮಹಾರಾಷ್ಟ್ರ ಸರ್ಕಾರದ ಕ್ರಮಕ್ಕೆ ಸರ್ವೋಚ್ಛ ನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ಪಂಚಮಸಾಲಿ ಸಮುದಾಯವನ್ನು ಹಾವನೂರು ಆಯೋಗ ಸೇರಿದಂತೆ ಎಲ್ಲ ಆಯೋಗಗಳು ಮುಂದುವರೆದ ಜಾತಿ ಎಂದೇ ಗುರುತು ಮಾಡಿದ್ದವು. ಆದರೆ, 2009ರಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗದ ಪಟ್ಟಿಗೆ ಸೇರಿಸಿತು. ಅವತ್ತು ಹಿಂದುಳಿದ ವರ್ಗ 3ಬಿ ಗೆ ಸೇರಿಕೊಂಡ ಸಮುದಾಯ ಈಗ 2ಎ ಗೆ ಬೇಡಿಕೆ ಸಲ್ಲಿಸಿದೆ. ಅದರ ಕುರಿತು ತಜ್ಞರ ಸಮಿತಿ ಚರ್ಚಿಸಲಿದೆ ಎಂದು ಅವರು ಭರವಸೆ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ ಯತ್ನಾಳ್, ಮುಖ್ಯಮಂತ್ರಿಗಳು ಪಂಚಮಸಾಲಿ ಸಮುದಾಯವನ್ನು ನಿರ್ಲಕ್ಷಿಸಿದ್ದಾರೆ ಎಂದು ಆರೋಪಿಸಿದರು.

ಮುಖ್ಯಮಂತ್ರಿಗಳು ಯಾಕೆ ನಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ, ಪಂಚಮಸಾಲಿ ಸಮುದಾಯವನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

# ಸುಭಾಷ್ ಅಡಿ ನೇತೃತ್ವದಲ್ಲಿ ಮೀಸಲಾತಿ ಸಮಿತಿ

**(1ನೇ ಪುಟದಿಂದ)** ಸಮುದಾಯದವರು ಎಸ್ಟಿಗೆ ಆಗ್ರಹಿಸುತ್ತಿದ್ದಾರೆ. ವೀರಶೈವ ಲಿಂಗಾಯತರು ಒಬಿಸಿ ಮೀಸಲಾತಿ ಕೇಳುತ್ತಿದ್ದಾರೆ. ಒಕ್ಕಲಿಗ ಸಮುದಾಯ ಸಹ ಮೀಸಲಾತಿ ಹೆಚ್ಚಳ ಬಯಸುತ್ತಿದೆ. ನಾಯಕ ಸಮುದಾಯ ಎಸ್ಟಿ ಮೀಸಲಾತಿ ಹೆಚ್ಚಿಸಬೇಕೆಂದು ಆಗ್ರಹಿಸಿದೆ. ಇತರೆ ಸಮುದಾಯಗಳೂ ಮೀಸಲಾತಿ ಹೆಚ್ಚಳ, ಮರು ಹಂಚಿಕೆಗೆ ಮನವಿ ಮಾಡಿದ್ದಾರೆ. ಎಲ್ಲಾ ಸಮುದಾಯಗಳ ಮೀಸಲಾತಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ತ್ರಿಸದಸ್ಯರನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿ ರಚಿಸಿ ಆದೇಶಿಸಲಾಗಿದೆ.

# ಕಾನೂನಿಗೆ ಸವಾಲಾಗಿರುವ ಸಿರಿವಂತ ಪುಂಡ ಬೈಕ್ ಸವಾರರು

**ನಗರದಲ್ಲಿ ಸಂಚಾರ ನಿಯಮಗಳ ಉಲ್ಲಂಘನೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ನಿಯಮ ಉಲ್ಲಂಘನೆಗೆ ಕಾಯ್ದೆ, ಕಾನೂನು ಇದ್ದರೂ ನಿಯಮ ಪಾಲಿಸುವ ಮನಸ್ಸು ಮಾಡದ ಈ ವಿದ್ಯಾವಂತ ಸಿರಿವಂತ ಪುಂಡರು... ಹಾಗೆಯೇ ಕಾನೂನಿಗೆ ಗೌರವ ಕೊಟ್ಟು ಹೆಲ್ಮೆಟ್ ಹಾಕಿ ಮುವತ್ತು ಕಿ.ಮಿ. ವೇಗದ ಒಳಗೇ ಬೈಕ್, ಕಾರು ಚಲಾಯಿಸುವವರೂ ಇದ್ದಾರೆ.**



ಈ ದಿನ ಬೆಳ್ಳಂಬೆಳಿಗ್ಗೆ ವಿದ್ಯಾನಗರ ಪಾರ್ಕ್ ಬಳಿ ಕಾರು-ಸ್ಕೂಟರ್ ಅಪಘಾತವಾದ ಸುದ್ದಿ... ವಿದ್ಯಾರ್ಥಿನಿಯನ್ನು ಹೈಟೆಕ್ ಆಸ್ಪತ್ರೆಗೆ ಕರೆದೊಯ್ದ ಬಗ್ಗೆ ಮಾಹಿತಿ ಬಂತು. ಈ ರೀತಿ ಅಪಘಾತಗಳು ಗುಂಡಿ ವೃತ್ತದಿಂದ ವಿದ್ಯಾನಗರದ ಕೊನೆ ಭಾಗದ ಬೈಪಾಸ್ ರಸ್ತೆಯವರೆಗೂ ಆಗುತ್ತಲೇ ಇರುತ್ತವೆ. ಒಂದೊಂದು ಪೊಲೀಸ್ ಗಮನಕ್ಕೆ ಬರುತ್ತಿರುತ್ತವೆ. ಬಹುಶಃ ಇದು ಕಾರ್ ಅಪಘಾತವಾದ್ದರಿಂದ ಪೊಲೀಸ್ ಠಾಣೆ ಮೆಟ್ಟಿಲೇರಿದೆ.

ಗುಂಡಿ ವೃತ್ತದಿಂದ ಡೆಂಟಲ್ ಕಾಲೇಜ್ ರಸ್ತೆ, ವಿದ್ಯಾನಗರ ಮುಖ್ಯರಸ್ತೆ, ನೂತನ ಕಾಲೇಜ್ ರಸ್ತೆ, ಹಾಸ್ಟೆಲ್ ರಸ್ತೆ, ಸಿದ್ದವೀರಪ್ಪ ಬಡಾವಣೆ ಮುಖ್ಯರಸ್ತೆ ಮುಂತಾದ ಕಡೆ 'ವೇಗದ ಮಿತಿ'ಯಾಗಲೀ, ಕಡ್ಡಾಯವಾಗಿ ಹೆಲ್ಮೆಟ್ ಧರಿಸುವುದಾಗಲೀ, ತ್ರಿಬಲ್ ರೈಡಿಂಗ್ ಮಾಡುವುದಕ್ಕಾಗಲೀ, ಒಂದು ಕೈಲಿ ಮೊಬೈಲ್ ಹಿಡಿದು ಮಾತನಾಡುತ್ತಾ ಒಂದೇ ಕೈಲಿ ಬೈಕ್ ಡ್ರೈವ್ ಮಾಡುವುದಕ್ಕಾಗಲೀ ಕಾನೂನು ನಿರ್ಬಂಧ ಇದ್ದಂತೆ ಕಾಣುತ್ತಿಲ್ಲ!

ಈ ಭಾಗದಲ್ಲಿ ಶೇಕಡ 10 ರಷ್ಟು ಬೈಕುಗಳ ನಂಬರ್ ಪ್ಲೇಟ್ ತೆಗೆದು, ನಂಬರ್ ಪ್ಲೇಟ್ ಇಲ್ಲದೆ ಅರವತ್ತು-ಎಪ್ಪತ್ತು ಕಿ.ಮೀ. ಸ್ಪೀಡಿನಲ್ಲಿ ಓಡಿಸುವ ಶ್ರೀಮಂತ, ವಿದ್ಯಾವಂತ ಪುಂಡ ಹುಡುಗರಿದ್ದಾರೆ. ಅರ್ಧ ಚಣ್ಣ ಹಾಕಿಕೊಂಡು ಬಣ್ಣ ಬಣ್ಣದ ಪಲ್ಸರ್ ಬೈಕ್ ಓಡಿಸುತ್ತಾರೆ. ಇನ್ನು ಕೆಲವು ಬೈಕುಗಳಿಗೆ ನಂಬರ್ ಪ್ಲೇಟ್ ಇದ್ದರೂ, ನಂಬರ್ ಕಾಣದಂತೆ ಫಿಕ್ಸ್ ಮಾಡಿಸಿಕೊಂಡಿದ್ದಾರೆ. ಸ್ಕೂಟರ್‌ಗಳಿಗೆ ಕಾರಿನ ಹಾರನ್ ಹಾಕಿಸಿ, ಪೊಲೀಸರ ಸಿಸಿ ಕ್ಯಾಮರಾ ಹಾಗೂ ಮೊಬೈಲ್‌ಗಳಿಗೆ ಸಿಗದಂತೆ ವೇಗವಾಗಿ ಬೈಕ್ ಓಡಿಸಿಕೊಂಡು ಹೋಗಲು ಈ ಪುಂಡ ಹುಡುಗರು ಬಳಸುವ ತಂತ್ರಗಳು.

ಇನ್ನು ಕೆಲವು ವಿಕೃತ ಮನಸ್ಸಿನ ಹುಡುಗರು ಬೈಕ್‌ಗಳ ಸೈಲೆನ್ಸರ್ ತೆಗೆದು ಓಡಿಸುತ್ತಾರೆ. ಗುಂಡಿ ಸರ್ಕಲ್‌ನಿಂದ ಈಚಿನ ರಸ್ತೆಗಳಲ್ಲಿ ದಿನ ನಿತ್ಯ ಇಂತಹ ಸಂಚಾರಿ ವ್ಯವಸ್ಥೆ ಕಾಣಬಹುದು. ಈ ಭಾಗದಲ್ಲಿ ಹಿರಿಯ ನಾಗರಿಕರು, ಮಹಿಳೆಯರು ತಮ್ಮ ವಾಹನ ಓಡಿಸುವಾಗ ಜೀವ ಹಿಡಿದುಕೊಂಡು ಡ್ರೈವ್ ಮಾಡುತ್ತಾರೆ. ರಸ್ತೆ ದಾಟುವುದಂತೂ ತುಂಬಾ ಕಷ್ಟದ ಕೆಲಸ. ಅಚ್ಚರಿ ಎಂದರೆ ಈ ಬೈಕುದಾರಿ ಪುಂಡರ ಸಾಮ್ರಾಜ್ಯ ಇರುವುದೇ ಡಿಐಜಿ ಹಾಗೂ ಎಸ್ಪಿ ಮನೆಗಳ ಸುತ್ತಮುತ್ತ...!

ಪ್ರಾಮಾಣಿಕ ಪೊಲೀಸರಿಗೆ ಈ ಪುಂಡರು ಧಮಿಕಿ ಹಾಕಿದ ಉದಾಹರಣೆಗಳೂ ಇವೆ. ಹಿಂದೆ ಎಎಸ್ಐ ಅಂಜನಪ್ಪ ಅವರು ಪೆಟ್ಟುತಿಂದ ಉದಾಹರಣೆ ನಮ್ಮ ಮುಂದಿದೆ.

ಹಾಗಾದರೆ, ಈ ಪುಂಡರನ್ನು ಹೀಗೆ ಬಿಡಬೇಕೆ? ಆರೇಳು ವರ್ಷಗಳ ಹಿಂದೆ ರೇವಣ್ಣ ಅನ್ನೋ ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಮಂಜುನಾಥ್ ಪಂಡಿತ್ ಅನ್ನೋ ಟ್ರಾಫಿಕ್ ಎಸ್ಐ ಇದ್ದಾಗಲೂ ಈ ಭಾಗದ ಬೈಕ್ ಸವಾರರು ಇದೇ ರೀತಿ ಸವಾಲಾದರು. ಆಗ ಇಬ್ಬರು ಪೊಲೀಸ್ ಅಧಿಕಾರಿಗಳು ಈ ಭಾಗದ ಶಾಲಾ-ಕಾಲೇಜುಗಳಿಗೆ ಹೋಗಿ ಯುವಕರಿಗೆ, ವಿದ್ಯಾರ್ಥಿಗಳಿಗೆ ತಿಳಿಹೇಳಿ ಕಾನೂನಿನ ಪಾಠ ಮಾಡಿದರೂ ಈ ಪುಂಡರಿಗೆ ಬುದ್ದಿ ಬರಲಿಲ್ಲ. ನಂತರ ಅವರು ಸಿವಿಲ್ ಡ್ರೆಸ್‌ನಲ್ಲಿ ರಿಜರ್ವ್ ಪೊಲೀಸ್ ಬಳಸಿಕೊಂಡು, ಈ ಭಾಗದ ಅಡ್ಡರಸ್ತೆಗಳಿಗೆ ನಿಯೋಜಿಸಿ, ನಾಲ್ಕೈದು ದಿನಗಳ ಕಾಲ ಬಗ್ಗು ಬಡಿದರು, ಸ್ವಲ್ಪ ದಿನಗಳ ವರೆಗೆ ಈ ಪುಂಡರು ಸೈಲೆಂಟಾದಂತಿದ್ದು, ಮತ್ತೆ ಇವರ ಆಟ ಶುರುವಾಗಿದೆ.



ಕಾನೂನಿಗೆ ಚಳ್ಳೆಹಣ್ಣು ತಿನ್ನಿಸುತ್ತಿರುವ ಬೈಕ್ ಸವಾರರಿಂದ ಪೊಲೀಸರು ಸುಸ್ತು...!

ಕೆಲವು ನಾಗರಿಕರು ಹೀಗೂ ದೂರುತ್ತಾರೆ. ನಮ್ಮ ಪೊಲೀಸರು 'ಮೂವತ್ತು ಕಿಲೋಮೀಟರ್ ಸ್ಪೀಡಿನ ಮಿತಿಯಲ್ಲಿಯೇ ಹೋಗುತ್ತಿದ್ದರು, ಹೆಲ್ಮೆಟ್ ಧರಿಸಿದ್ದರೂ, ನಿಲ್ಲಿಸಿ ಒಂದಲ್ಲಾ ಒಂದು ದಾಖಲೆಗಳನ್ನು ಕೆದಕಿ ಕಿರಿಕಿರಿ ಮಾಡುತ್ತಾರೆ. ಆದರೆ ಹೆಲ್ಮೆಟ್ ಧರಿಸದೇ ಮಿತಿಮೀರಿದ ವೇಗದಲ್ಲಿ ಚಲಿಸುವ ಸವಾರರನ್ನು ಗಮನಿಸುವುದೇ ಇಲ್ಲ'.

ಪೊಲೀಸ್ ಅಧಿಕಾರಿಗಳ ಹಾಗೂ ಪೊಲೀಸ್‌ರವರಿಗೆ ಇನ್ನೊಂದು ವಿಷಾದದ ಮನವಿ... ನಮ್ಮ ಪೊಲೀಸರು ಲೋಕಿಕೆರೆ ರಸ್ತೆ, ಅಶೋಕ ಟಾಕೀಸ್ ಹಿಂಭಾಗ, ಬಾಡ ಕ್ರಾಸ್, ಈ ರೀತಿ ಪಾಯಿಂಟ್‌ಗಳಲ್ಲಿ ಹಳ್ಳಿಗರ-ಕಾರ್ಮಿಕರ ವಾಹನ ನಿಲ್ಲಿಸಿ ತಪಾಸಣೆ ಮಾಡಿ ದಂಡ ವಿಧಿಸಿ, ರಶೀದಿ ಹರಿಯುತ್ತಿರುತ್ತಾರೆ. ಕಾನೂನು ಪ್ರಕಾರ ನೀವು ಮಾಡುತ್ತಿರುವುದು ಸರಿ ಬಿಡಿ.... ಅದೇ ಪೊಲೀಸರು ದಾವಣಗೆರೆ ಎಂಸಿಸಿ. ಬಿ ಬ್ಲಾಕ್, ಗುಂಡಿ ವೃತ್ತ ಸುತ್ತಮುತ್ತ, ವಿದ್ಯಾನಗರ, ನೂತನ ಕಾಲೇಜ್ ರಸ್ತೆ, ಶಾಮನೂರು ರಸ್ತೆ ಈ ಭಾಗದಲ್ಲಿ ಕಟ್ಟುನಿಟ್ಟಿನ ತಪಾಸಣೆ ಮಾಡಿದರೆ ಪ್ರತಿದಿನ ಲಕ್ಷ ರೂಪಾಯಿಗಳಿಗಿಂತ ಹೆಚ್ಚು ದಂಡ ವಸೂಲಿ ಮಾಡಬಹುದಲ್ಲವೇ...? ಈ ಬಗ್ಗೆ ನಮ್ಮ ಎಸ್ಪಿ, ಡಿವೈಎಸ್ಪಿ, ಇನ್ಸ್‌ಪೆಕ್ಟರ್ ಯೋಚನೆ ಮಾಡಿದರೆ ಮುಂದಾಗುವ ಅನಾಹುತಗಳನ್ನು ತಪ್ಪಿಸಬಹುದಲ್ಲವೇ.

**- ಬಾ.ಮ. ಬಸವರಾಜಯ್ಯ**

## ಖಾಸಗಿ ವಾಹನಗಳ ನಿರ್ವಾಹಕ - ಕ್ಲೀನರ್ ನೋಂದಣಿಗೆ ಅರ್ಜಿ ಆಹ್ವಾನ

ದಾವಣಗೆರೆ, ಮಾ. 10 - ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ ಖಾಸಗಿ ವಾಣಿಜ್ಯ ಸಾರಿಗೆ ವಾಹನಗಳ ನಿರ್ವಾಹಕರು ಹಾಗೂ ಕ್ಲೀನರ್‌ಗಳ ನೋಂದಣಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಸೂಕ್ತ ದಾಖಲೆಗಳೊಂದಿಗೆ ಕಾರ್ಮಿಕ ಅಧಿಕಾರಿಗಳ ಕಛೇರಿ, ದಾವಣಗೆರೆ ಡಿ. ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ದಾವಣಗೆರೆ, ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿ ಕಟ್ಟಡ ಪಿ.ಬಿ ರಸ್ತೆ, ದಾವಣಗೆರೆ ಇಲ್ಲಿ ನೋಂದಾಯಿಸಬಹುದಾಗಿದೆ.

# ಲಸಿಕೆಯಲ್ಲಿ ಶೇ.1ಕ್ಕೂ ಕಡಿಮೆ ಗುರಿ ಸಾಧನೆ



**(1ನೇ ಪುಟದಿಂದ)** ಮೂಲಕ ಲಸಿಕೆ ಪ್ರಗತಿಯ ಕುರಿತು ವಿವರ ಪಡೆದಿದ್ದಾರೆ. ಯುದ್ಧೋಪಾದಿಯಲ್ಲಿ ಲಸಿಕಾ ಅಭಿಯಾನ ನಡೆಸಲು ಸೂಚನೆ ನೀಡಿದ್ದಾರೆ ಎಂದು ಬೀಳಗಿ ಹೇಳಿದ್ದಾರೆ.

ಕಳೆದ ವರ್ಷ ಮಾರ್ಚ್ ನಂತರ ಕೊರೊನಾ ತಡೆಯಲು ಸಮರೋಪಾದಿಯಲ್ಲಿ ಕಾರ್ಯ ನಿರ್ವಹಿಸಲಾಗಿತ್ತು. ಈಗ ಲಸಿಕೆಗೂ ಸಹ ಅದೇ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಲಸಿಕೆ ಕುರಿತು ಅಭಿಯಾನ ನಡೆಸಲಾಗುವುದು. ವಿಶೇಷ ವಾಗಿ ದಾವಣಗೆರೆಯ ಹಳೆ ಭಾಗದ ಕಡೆ ಗಮನ ಹರಿಸಲಾಗುವುದು ಎಂದವರು ಹೇಳಿದ್ದಾರೆ. ಮುಂದಿನ ಹದಿನೈದು ದಿನಗಳಲ್ಲಿ ಸರ್ಕಾರ ನೀಡಿ ರುವ ಗುರಿಯನ್ನೂ ಮೀರಿ ಲಸಿಕೆಯಲ್ಲಿ ಸಾಧನೆ ಮಾಡುವ ವಿಶ್ವಾಸವಿದೆ ಎಂದವರು ಹೇಳಿದ್ದಾರೆ.

ಹಿರಿಯ ನಾಗರಿಕರು ಹಾಗೂ 45 ವರ್ಷ ಮೇಲ್ಪಟ್ಟ ಸಹ ಅಸ್ವಸ್ಥತೆಯಿಂದ ಬಳಲುತ್ತಿರುವವರು ಲಸಿಕೆ ಪಡೆಯಲು ಆಧಾರ್ ಕಾರ್ಡ್‌ನೊಂದಿಗೆ ನೇರವಾಗಿ ಹತ್ತಿರದ ಸರ್ಕಾರಿ ಕೊರೊನಾ ಲಸಿಕಾ ಕೇಂದ್ರಕ್ಕೆ ತೆರಳಿ ಲಸಿಕೆ ಪಡೆಯಬಹುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಆನ್‌ಲೈನ್ ಮೂಲಕ ನೋಂದಣಿ ಮಾಡಿಸಲು ಹಿರಿಯ ನಾಗರಿಕರಿಗೆ ತೊಡಕುಗಳು ಎದುರಾಗುತ್ತಿರುವ ಕುರಿತ ಪ್ರಶ್ನೆಗಳಿಗೆ ಉತ್ತರಿಸಿರುವ ಜಿಲ್ಲಾಧಿಕಾರಿ, ನಿಗದಿತ ದಿನಗಳಂದು ಸರ್ಕಾರಿ ಲಸಿಕಾ ಕೇಂದ್ರಗಳಿಗೆ ಆಧಾರ್ ಕಾರ್ಡ್ ಜೊತೆ ತೆರಳಿ ಲಸಿಕೆ ಪಡೆಯಬಹುದು ಎಂದು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಸಿಇಒ ಡಾ. ವಿಜಯ ಮಹಾಂತೇಶ ದಾನಮ್ಮನವರ್, ಸೋಂಕಿತರ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಕ್ಕೆ ಬಂದವರು, ಜ್ವರ ಮತ್ತು ಉಸಿರಾಟದ ಸಮಸ್ಯೆಯಿಂದ ಬಳಲುತ್ತಿರುವವರ ಪರೀಕ್ಷೆಗಾಗಿ ಆರೋಗ್ಯ ಕೇಂದ್ರಗಳಿಗೆ ಸೂಚನೆ ನೀಡಲಾಗಿದೆ.

> **ಜಿಲ್ಲೆಗೆ ಪ್ರತಿನಿತ್ಯ 2,800 ಕೊರೊನಾ ಟೆಸ್ಟ್‌ಗಳ ಗುರಿ ನೀಡಲಾಗಿದೆ. ಕಳೆದ 10 ದಿನಗಳಲ್ಲಿ ಶೇ.64ರಷ್ಟು ಗುರಿ ಮಾತ್ರ ತಲುಪಲಾಗಿದೆ.**
>
> **- ಡಾ. ವಿಜಯ ಮಹಾಂತೇಶ ದಾನಮ್ಮನವರ್, ಜಿ.ಪಂ. ಸಿಇಒ**

ಜನನಿಬಿಡ ಪ್ರದೇಶಗಳು ಹಾಗೂ ಜನರ ಸಂಪರ್ಕಕ್ಕೆ ಬರುವವರನ್ನು ಹೆಚ್ಚಾಗಿ ಗುರುತಿಸಿ ಪರೀಕ್ಷೆ ನಡೆಸಲಾಗುವುದು ಎಂದವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಘವನ್, ಆರ್.ಸಿ.ಹೆಚ್. ಅಧಿಕಾರಿ ಡಾ. ಮೀನಾಕ್ಷಿ, ನಗರಾಭಿವೃದ್ಧಿ ಕೋಶದ ಅಧಿಕಾರಿ ನಜ್ಮಾ, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

# ವಸತಿ ಗೃಹ: ಪುನರ್ ಪರಿಶೀಲನೆ

**(1ನೇ ಪುಟದಿಂದ)** ಕಂದಾಯ ಸಚಿವ ಆರ್. ಅಶೋಕ್ ಹೇಳಿದ್ದಾರೆ.

ವಿಧಾನ ಪರಿಷತ್ ಸದಸ್ಯ ಮೋಹನ್ ಕುಮಾರ್ ಕೊಂಡಜ್ಜಿ ಅವರು ಕೇಳಿದ ಚುಕ್ಕೆ ಗುರುತಿನ ಪ್ರಶ್ನೆಗೆ ವಿಧಾನಪರಿಷತ್‌ನಲ್ಲಿ ಉತ್ತರಿ ಸಿದ ಅಶೋಕ್, 2020ರ ಜುಲೈ 27ರಂದು ಜಿಲ್ಲಾಧಿಕಾರಿಗಳ ಪತ್ರ ದಂತೆ ದಾವಣಗೆರೆ ವಿಶ್ವವಿದ್ಯಾನಿಲ ಯಕ್ಕೆ ಸೇರಿದ ದೃಶ್ಯಕಲಾ ಮಹಾವಿದ್ಯಾಲಯದ ಆವರಣದ ಶಾಮನೂರು ಗ್ರಾಮದ ಸರ್ವೆ ನಂಬರ್ 97ರ 4.31 ಎಕರೆ ಜಮೀನನ್ನು ಜಿಲ್ಲಾ ಮಟ್ಟದ ಅಧಿಕಾರಿಗಳ ವಸತಿ ಗೃಹ ನಿರ್ಮಾಣಕ್ಕಾಗಿ ಕಾಯ್ದಿರಿಸಿ ಅನುಮೋದನೆ ನೀಡಲಾಗಿತ್ತು ಎಂದು ತಿಳಿಸಿದರು.

ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ವಿಧಾನಪರಿಷತ್ ಸದಸ್ಯ ಮೋಹನ್ ಕುಮಾರ್ ಕೊಂಡಜ್ಜಿ, ಶಿಕ್ಷಣ ಸಂಸ್ಥೆಗೆ ಸೇರಿದ ಆಸ್ತಿಯನ್ನು ವಸತಿ ಉದ್ದೇಶಕ್ಕೆ ನೀಡುವ ಸರ್ಕಾರದ ಕ್ರಮವನ್ನು ಖಂಡಿಸುತ್ತಾ, ಈಗಾಗಲೇ ದಾವಣಗೆರೆ ಜಿಲ್ಲೆಯ ಸಂಸದ ಜಿ.ಎಂ. ಸಿದ್ದೇಶ್ವರ್, ಹಿರಿಯ ಶಾಸಕರುಗಳಾದ ಡಾ॥ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್ ಸೇರಿದಂತೆ ಎಲ್ಲಾ ಶಾಸಕರು ವಿರೋಧ ವ್ಯಕ್ತಪಡಿಸಿ ಪತ್ರ ನೀಡಿದ್ದರೂ ಸಹ ಸರ್ಕಾರ ಆಸ್ತಿಯನ್ನು ಏಕೆ ಪರಭಾರೆ ಮಾಡುತ್ತಿದೆ ಎಂದು ಪ್ರಶ್ನಿಸಿದರು.

ಮೋಹನ್ ಕುಮಾರ್ ಕೊಂಡಜ್ಜಿ ಅವರ ಆಕ್ಷೇಪದ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ವಸತಿ ಗೃಹ ನಿರ್ಮಾಣಕ್ಕಾಗಿ ಅನುಮೋದನೆ ನೀಡಿರುವುದನ್ನು ಪುನರ್ ಪರಿಶೀಲಿಸಲಾಗುವುದು ಎಂದು ಭರವಸೆ ನೀಡಿ ಚರ್ಚೆಗೆ ಇತಿಶ್ರೀ ಹಾಡಿದರು.

ಈ ಬಗ್ಗೆ 'ಜನತಾವಾಣಿ'ಯೊಂದಿಗೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಮೋಹನ್ ಕುಮಾರ್ ಕೊಂಡಜ್ಜಿ, ವಿಧಾನ ಪರಿಷತ್ ನಲ್ಲಿ ಚುಕ್ಕೆ ಗುರುತಿನ ಪ್ರಶ್ನೆಯಡಿ ಫೈನ್ ಆರ್ಟ್ಸ್ ಕಾಲೇಜು ಆವರಣದಲ್ಲಿ ಅಧಿಕಾರಿಗಳ ವಸತಿ ನಿರ್ಮಾಣದ ಬಗ್ಗೆ ಪ್ರಶ್ನಿಸಿದ್ದೇನೆ.

ದೃಶ್ಯಕಲಾ ಮಹಾವಿದ್ಯಾಲಯ ರಾಜ್ಯದಲ್ಲಿಯೇ ನಂಬರ್ ಒನ್ ಸ್ಥಾನದಲ್ಲಿದ್ದು, ಈಗಾಗಲೇ ಅಲ್ಲಿ ಹಾಸ್ಟೆಲ್‌ಗಳನ್ನೂ ನಿರ್ಮಿಸಲಾಗಿದೆ. ಅಲ್ಲದೆ ಡಿಸಿ ಹಾಗೂ ಎಸ್ಪಿ ವಸತಿಗಳನ್ನು ಈಗಾಗಲೇ ಬೇರೆ ಕಡೆ ನಿರ್ಮಿಸಲಾಗಿರುವ ಬಗ್ಗೆಯೂ ಕಂದಾಯ ಸಚಿವರ ಗಮನಕ್ಕೆ ತಂದಿದ್ದೇನೆ.

ನಮಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯದ ಕಾರಣ ಅನುಮೋದನೆ ನೀಡಿದ್ದೆವು. ಆದರೆ ಇದೀಗ ಪುನರ್ ಪರಿಶೀಲನೆ ಮಾಡುವುದಾಗಿ ಕಂದಾಯ ಸಚಿವರು ಹೇಳಿದ್ದಾಗಿ ತಿಳಿಸಿದರು.

## ಚಿರಸ್ಮರಣೆ



**ಲಿಂ. ಶ್ರೀ ಕೆ.ಜೆ. ಸುರೇಶ್ (ಬಾಬಣ್ಣ)**

**ಶಿರಮಗೊಂಡನಹಳ್ಳಿ**

ನಿಧನ : 11-03-2019

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : **ಶ್ರೀಮತಿ ಪುಷ್ಪಾ ಸುರೇಶ್**
ಮಾಜಿ ಉಪಾಧ್ಯಕ್ಷರು, ಜಿಲ್ಲಾ ಪಂಚಾಯ್ತಿ, ದಾವಣಗೆರೆ.
ಪುತ್ರ : **ಚಿ. ಸನತ್ ಸೂರ್ಯ**
ಪುತ್ರಿ : **ಶ್ರೀಮತಿ ಸಂಜನಾ,** ಅಳಿಯ : **ಸಚಿನ್ ಗೌಡ**
ಸಹೋದರರು, ಸಹೋದರಿಯರು ಮತ್ತು ಬಂಧು-ಮಿತ್ರರು.

## ಪುಣ್ಯಸ್ಮರಣೆ



**ದಿ॥ ಸವನೂರು ವೀರಪ್ಪನವರು**

**ನಿಧನ : 11.03.1978**

**ತಮ್ಮ ಸ್ಮರಣೆಯಲ್ಲಿರುವ....**


**ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು ಹಾಗೂ ಸವನೂರು ವಂಶಸ್ಥರು**

**ಎಸ್.ವಿ.ಸಿ. ಪ್ಲಾಜಾ, ದಾವಣಗೆರೆ.**

## ಸಮಿತಿಗೆ ಆಯ್ಕೆ

**(1ನೇ ಪುಟದಿಂದ)** ಅಧ್ಯಕ್ಷರಾಗಿ ಎಲ್.ಡಿ ಗೋಣೆಪ್ಪ, ಪಟ್ಟಣ ಯೋಜನೆ, ಸುಧಾರಣೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಉಮಾ ಪ್ರಕಾಶ್ ಹಾಗೂ ಲೆಕ್ಕ ಪತ್ರಗಳ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಗೀತಾ ದಿಳ್ಯಪ್ಪ ಆಯ್ಕೆಯಾಗಿದ್ದಾರೆ.

## ಮಲೇಬೆನ್ನೂರು ವಾಸಿ ಕಾಯಕದ ಚಂದ್ರಪ್ಪ ನಿಧನ



ಮಲೇಬೆನ್ನೂರು ಪಟ್ಟಣದ ವಾಸಿ ಹಡಪದ ಅಪ್ಪಣ್ಣ ಸಮಾಜದ ಮುಖಂಡರಾದ ಶ್ರೀ ಕಾಯಕದ ಚಂದ್ರಪ್ಪ (55 ವರ್ಷ) ಅವರು ದಿನಾಂಕ 10.03.2021 ರ ಬುಧವಾರ ಬೆಳಿಗ್ಗೆ 10.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.03.2021 ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಹೊನ್ನಾಳಿ ತಾ. ಕೋಣನ ತಲೆ ಗ್ರಾಮದಲಿ ನೆರವೇರಲಿದೆ.

# ಭತ್ತ ಕಟಾವಿಗೆ ಬರುವ ತನಕ ಜೊತೆ ಇರುವೆ

**(1ನೇ ಪುಟದಿಂದ)** ಮಲೇಬೆನ್ನೂರು ಭಾಗಕ್ಕೆ ಬರಬೇಕಾದ ನೀರನ್ನು ಸರಿಯಾಗಿ ಕಳುಹಿಸಲು ಗಮನ ಹರಿಸಿ ಎಂದು ತಾಕೀತು ಮಾಡಿದರು. ಪಾಳ್ಯ ಸಮೀಪ ಇರುವ ಕೆರೆಯನ್ನು ಭದ್ರಾ ಕಾಲುವೆ ನೀರಿನಿಂದ ತುಂಬಿಸಿದರೆ ಬೇಸಿಗೆ ಸಮಯದಲ್ಲಿ ಜನರಿಗೆ ಮತ್ತು ದನ-ಕರುಗಳಿಗೆ ಅನುಕೂಲವಾಗುತ್ತದೆ ಎಂದು ಗ್ರಾಮಸ್ಥರು ಅಧ್ಯಕ್ಷರ ಗಮನ ಸೆಳೆದಾಗ, ಬರೀ ನಿಮ್ಮೂರಿನ ಕೆರೆ ಅಷ್ಟೇ ಅಲ್ಲ. ಭದ್ರಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳಿಗೆ ಮಳೆಗಾಲದಲ್ಲಿ ನೀರು ಹರಿಸುವ ಚಿಂತನೆ ಹೊಂದಿದ್ದೇನೆ. ಈ ಕುರಿತು ಮುಖ್ಯಮಂತ್ರಿಗಳ ಬಳಿ ಚರ್ಚಿಸಿ, ಕೆರೆಗಳನ್ನು ಅಭಿವೃದ್ಧಿಪಡಿಸಿ, ಭರ್ತಿ ಮಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

**ಮಡಿಲಕ್ಕಿ ಹಾಕಿದ ಮಹಿಳೆಯರು:** ಕಾಲುವೆಗಳ ಮೇಲೆ ಸಂಚರಿಸುತ್ತಾ ಹೊಳೆಸಿರಿಗೆರೆ ಗ್ರಾಮಕ್ಕೆ ಆಗಮಿಸಿದ ಪವಿತ್ರ ರಾಮಯ್ಯ ಅವರನ್ನು ತಿಪ್ಪೇರುದ್ರಪ್ಪ ಅವರ ಮನೆಯಲ್ಲಿ ಮಹಿಳೆಯರು ಮಡಿಲಕ್ಕಿ ಹಾಕಿ ಕೃತಜ್ಞತೆ ಸಲ್ಲಿಸಿದರು. ಪ್ರತಿ ವರ್ಷ ಬೇಸಿಗೆ ಸಮಯದಲ್ಲಿ ನಮ್ಮ ಭಾಗದ ತೋಟಗಳು ನೀರಿಲ್ಲದೆ ಒಣಗುತ್ತಿದ್ದವು. ಈ ಬಾರಿ ತೋಟಗಳು ಸಮೃದ್ಧಿಯಾಗಿದ್ದು, ನಾಟಿಯನ್ನೂ ಮಾಡಿದ್ದೇವೆ. ಇದಕ್ಕೆಲ್ಲಾ ನಿಮ್ಮ ಇಚ್ಛಾಶಕ್ತಿಯೇ ಕಾರಣ ಎಂದು ಪವಿತ್ರ ರಾಮಯ್ಯ ಅವರನ್ನು ಹೊಗಳಿದರು.

**ನೀರು ಬರುತ್ತಿಲ್ಲ:** ಕಮಲಾಪುರದ ಕೊನೆ ಭಾಗದ ಕಾಲುವೆಗಳಿಗೆ ಭೇಟಿ ನೀಡಿದಾಗ ಕಮಲಾಪುರ, ಭಾನುವಳ್ಳಿ ರೈತರು 12 ಎಫ್ ಮತ್ತು 16,17 ನೇ ಕಾಲುವೆಯಲ್ಲಿ ನೀರು ಸಮರ್ಪಕವಾಗಿ ಬರುತ್ತಿಲ್ಲ. ನಮ್ಮ ಕಾಲುವೆಗಳಲ್ಲಿ ನೀರು ಹರಿಯುವ ಅವಧಿ ಮುಗಿಯುತ್ತಾ ಬಂದಿದೆ. ನೀರು ಸಮರ್ಪಕವಾಗಿ ಬರದಿದ್ದರೆ ನಾಟಿ, ಜೋಳ ಒಣಗುತ್ತದೆ ಎಂದು ದೂರಿದರು.

ಈ ವೇಳೆ ಕೆಲ ರೈತರು ಜೋರಾಗಿ ಕೂಗಾಡಿದರು. ಇದಕ್ಕೆ ಸ್ವಲ್ಪ ಬೇಸರಗೊಂಡ ಪವಿತ್ರ ಅವರು ಕೂಗಾಡಬೇಡಿ, ನಾನು ರೈತ ಹೋರಾಟದಿಂದ ಬೆಳೆದು ಬಂದಿದ್ದೇನೆ. ನೀವು ಕಾಲುವೆ ನೀರನ್ನೇ ನಂಬಿ ಸಾಲ-ಸೋಲ ಮಾಡಿ ನಾಟಿ ಮಾಡಿದ್ದೀರಿ ಎಂಬ ಅರಿವು ನನಗಿದೆ. ನಿಮಗೆ ನೀರಿನ ತೊಂದರೆ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು. ಅದಕ್ಕಾಗಿ ಸಹಾಯವಾಣಿ ಮಾಡಿದ್ದೇವೆ. ನೀರಿಗೆ ಸಂಬಂಧಿಸಿದ ನಿಮ್ಮ ಯಾವುದೇ ಸಮಸ್ಯೆ ಇದ್ದರೂ ಸಹಾಯವಾಣಿಗೆ ಕರೆ ಮಾಡಿ ತಿಳಿಸಿ ಎಂದು ಕರಪತ್ರ ಹಂಚಿದರು.

ಇನ್ನೆರಡು ದಿನಗಳಲ್ಲಿ ಈ ಭಾಗಕ್ಕೆ ಬರಬೇಕಾದ ನೀರು ತಲುಪಿಸುವ ಜವಾಬ್ದಾರಿ ನಿಮ್ಮದು ಎಂದು ಇಇ ಚಿದಂಬರ್ ಲಾಲ್, ಎಇಇ ಸಂತೋಷ್, ಎಇ ಮಲ್ಲಿಕಾರ್ಜುನ್ ಅವರಿಗೆ ಸೂಚನೆ ನೀಡಿ, ಅಚ್ಚುಕಟ್ಟಿನ ಕೊನೆ ಭಾಗದ ರೈತರ ಭತ್ತ ಕಟಾವಿಗೆ ಬರುವ ತನಕ ನಾನು ನಿಮ್ಮ ಜೊತೆ ಇರುತ್ತೇನೆ. ಮತ್ತೆ ಮುಂದಿನ ತಿಂಗಳು ಇಲ್ಲಿಗೆ ಬಂದು ನೀರಿನ ನಿರ್ವಹಣೆ ಪರಿಶೀಲಿಸುತ್ತೇನೆ ಎಂದು ರೈತರಿಗೆ ಅಭಯ ನೀಡಿದರು. ನಂತರ ಭಾನುವಳ್ಳಿ ಗ್ರಾಮಕ್ಕೆ ಆಗಮಿಸಿ, ಡಿ.ಬಿ. ಕೆರೆ ಪಿಕಪ್ ನಾಲೆ ವೀಕ್ಷಿಸಿ, ರೈತರ ಸಮಸ್ಯೆಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ ಅವರು ಕಳೆದ ವರ್ಷ ಬೇಸಿಗೆ ಸಮಯದಲ್ಲಿ ನೀರಿಲ್ಲದೆ ಕೊನೆ ಭಾಗದಲ್ಲಿ ನಾಟಿ ಒಣಗಿದ್ದವು. ನಾನು ಮತ್ತು ಅಂದಿನ ಎಇಇ ರವಿಕುಮಾರ್ ಅವರು R2 ವರೆಗೆ ಹೋಗಿ ಕೆಳ ಭಾಗಕ್ಕೆ ಬೇಕಾದ ನೀರನ್ನು ಹೋರಾಟ ಮಾಡಿ ತಂದಿದ್ದೆವು. ಈ ಬಾರಿ ಕಾಡಾ ಅಧ್ಯಕ್ಷರು ಆ ಸಮಸ್ಯೆ ತಪ್ಪಿಸಿದ್ದಾರೆ. ತಮ್ಮ ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣೆವಾಗಿ ನಿರ್ವಹಿಸಿದ್ದಾರೆ. ಭದ್ರಾ ಕಾಡಾಗೆ ಇಂತಹ ಅಧ್ಯಕ್ಷರ ಅವಶ್ಯಕತೆ ಇತ್ತು ಎಂದು ರೈತರ ಪರವಾಗಿ ಪವಿತ್ರಾ ಅವರನ್ನು ಅಭಿನಂದಿಸಿದರು. ಡಿ.ಬಿ. ಕೆರೆ ಪಿಕಪ್ ಕಾಲುವೆಗಳಲ್ಲಿ ತುಂಬಿಕೊಂಡಿರುವ ಹೂಳು ತೆಗೆಸಲು ಗಮನ ಹರಿಸಿ ಎಂದು ಮನವಿ ಮಾಡಿದರು.

ಭಾನುವಳ್ಳಿ ಗ್ರಾ.ಪಂ. ಅಧ್ಯಕ್ಷೆ ನೇತ್ರಾವತಿ ಕೊಟ್ರೇಶ್, ರೈತ ಸಂಘದ ಸಿರಿಗೆರೆ ಪಾಲಾಕ್ಷಪ್ಪ, ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ರೈತರಾದ ಯಲವಟ್ಟಿಯ ಅಂಜಿನಪ್ಪ, ಚನ್ನಬಸಪ್ಪ, ಶಾಂತವೀರಪ್ಪ, ರಾಮಚಂದ್ರಪ್ಪ, ಹನುಮಂತಗೌಡ, ಕೆ. ಮಂಜಪ್ಪ, ಸಿರಿಗೆರೆಯ ಬಿ. ಶೇಖರಪ್ಪ, ಮಾಗೋಡ್ ರವಿ, ಪ್ರಭು, ಭಾನುವಳ್ಳಿಯ ಹೆಚ್.ಎಸ್. ಕರಿಯಪ್ಪ, ಕೆಂಚಪ್ಪ, ಪವಾಡಿ ಮಂಜಪ್ಪ, ಮಲ್ಲಪ್ಪ ರೆಡ್ಡಿ, ಯಲ್ಲಪ್ಪ ರೆಡ್ಡಿ, ಎಂ. ರವಿ ಇನ್ನಿತರರು ಹಾಜರಿದ್ದರು.

ನಂತರ ಕಾಡಾ ಅಧ್ಯಕ್ಷರು ಕೆ. ಬೇವಿನಹಳ್ಳಿ, ಬನ್ನಿಕೋಡು, ದೊಡ್ಡಬಾತಿ, ಕಕ್ಕರಗೊಳ್ಳ ಗ್ರಾಮಗಳ ಕೊನೆ ಭಾಗದ ಕಾಲುವೆಗಳಿಗೆ ಭೇಟಿ ನೀಡಿ, ನೀರಿನ ನಿರ್ವಹಣೆ ಕುರಿತು ರೈತರ ಸಮಸ್ಯೆ ಆಲಿಸಿ, ಇಂಜಿನಿಯರ್‌ಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದರು.

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಎನ್.ಬಿ. ರಾಮಪ್ಪನವರು
ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷರು, ಹರಿಹರ.

॥ ಶ್ರೀ ಆಂಜನೇಯ ಪ್ರಸನ್ನ ॥

**ಪರಮಪೂಜ್ಯ ಶ್ರೀ ಶ್ರೀ ಶ್ರೀ ಜಗದ್ಗುರು ನಿರಂಜನಾನಂದಪುರಿ ಮಹಾಸ್ವಾಮಿಗಳು,** ಕನಕ ಗುರುಪೀಠ, ಶ್ರೀಕ್ಷೇತ್ರ ಕಾಗಿನಲೆ,
**ಪರಮಪೂಜ್ಯ ಶ್ರೀ ಶ್ರೀ ಶ್ರೀ ಜಗದ್ಗುರು ಪ್ರಸನ್ನಾನಂದಪುರಿ ಮಹಾಸ್ವಾಮಿಗಳು,** ವಾಲ್ಮೀಕಿ ಗುರುಪೀಠ, ರಾಜನಹಳ್ಳಿ
ಇವರುಗಳ ಕೃಪಾಶೀರ್ವಾದಗಳೊಂದಿಗೆ

ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು ರಾಜನಹಳ್ಳಿ ಗ್ರಾಮದ ದಿ. **ಶ್ರೀಮತಿ ಕೊಟ್ರಮ್ಮ** ದಿ. **ನೆಸ್ವಿ ಸಣ್ಣಗಿರಿಯಪ್ಪನವರ ಮಗನಾದ**
**ಶ್ರೀಮತಿ ಲಕ್ಷ್ಮಮ್ಮ, ಶ್ರೀ ಎನ್.ಬಿ. ಹನುಮಂತಪ್ಪ ಮತ್ತು ಸಹೋದರರು** ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 03.03.2021ನೇ ಬುಧವಾರ ಮಧ್ಯಾಹ್ನ 1.00 ಗಂಟೆಗೆ ನನ್ನ ತಮ್ಮನಾದ

**ಶ್ರೀ ಎನ್.ಬಿ. ರಾಮಪ್ಪನವರು**

ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 11.03.2021ನೇ ಗುರುವಾರ ಬೆಳಿಗ್ಗೆ 10.30ಕ್ಕೆ ರಾಜನಹಳ್ಳಿ ಗ್ರಾಮದಲ್ಲಿರುವ ಶ್ರೀಮತಿ ಜಾನುಬಾಯಿ ಆರ್. ಶ್ರೀನಿವಾಸಮೂರ್ತಿ ಕಲ್ಯಾಣ ಮಂಟಪದಲ್ಲಿ** ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಮೃತರ ಧರ್ಮಪತ್ನಿ ಶ್ರೀಮತಿ ಗೌರಮ್ಮ ಮತ್ತು ಮಕ್ಕಳು,**
**ಶ್ರೀಮತಿ ಲಕ್ಷ್ಮಮ್ಮ, ಶ್ರೀ ಎನ್.ಬಿ. ಹನುಮಂತಪ್ಪ ಮತ್ತು ಸಹೋದರರು ಮತ್ತು ಮಕ್ಕಳು.**
**ಮಾವಂದಿರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು,**
**ಗೌಡ್ರು ಮತ್ತು ನೆಸ್ವಿ, ಬಣಕಾರ ವಂಶಸ್ಥರು, ರಾಜನಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**


ವಿ.ಸೂ. : ಆಹ್ವಾನ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಶ್ರೀಮತಿ ಚನ್ನವೀರಮ್ಮ ಬಾದಾಮಿ ನಿಧನ



ರಾಣೇಬೆನ್ನೂರು ವಾಸಿ ಈರುಳ್ಳಿ ವ್ಯಾಪಾರಸ್ಥರಾದ ಬಸವರಾಜಪ್ಪ ಗುರುಶಾಂತಪ್ಪ ಬಾದಾಮಿ ಇವರ ತಾಯಿ ಶ್ರೀಮತಿ ಚನ್ನವೀರಮ್ಮ ಬಾದಾಮಿ ಇವರು ದಿನಾಂಕ 10.3.2021 ನೇ ಬುಧವಾರ ರಾತ್ರಿ 8.15ಕ್ಕೆ ನಿಧನರಾದರು. ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.03.2021 ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಹರಿಹರ ತಾಲ್ಲೂಕು ಭಾನುವಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

## ಎಲ್.ಎಸ್. ನರಸಿಂಹಮೂರ್ತಿ ನಿಧನ



ದಾವಣಗೆರೆ ಮೌನೇಶ್ವರ ಬಡಾವಣೆ ವಾಸಿ ಎಲ್.ಎಸ್. ನರಸಿಂಹಮೂರ್ತಿ (45) ಅವರು ದಿನಾಂಕ 10.3.2021ರ ಬುಧವಾರ ಸಂಜೆ 6 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.03.2021ರ ಗುರುವಾರ ಮಧ್ಯಾಹ್ನ 2 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

# ಸಂತಪೌಲರ ವಿದ್ಯಾಸಂಸ್ಥೆ ವೆಬ್‌ಸೈಟ್ ಉದ್ಘಾಟನೆ

ದಾವಣಗೆರೆ, ಮಾ.10- 75 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಅಮೃತ ಮಹೋತ್ಸವದ ಸಂಭ್ರಮದಲ್ಲಿರುವ ನಗರದ ಸಂತಪೌಲರ ವಿದ್ಯಾಸಂಸ್ಥೆಯಿಂದ ಬುಧವಾರ ಸಂಸ್ಥೆಯ ವೆಬ್‌ಸೈಟ್‌ಗೆ ಚಾಲನೆ ನೀಡಲಾಯಿತು.

ಸಂತಪೌಲರ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಮುಖ್ಯಸ್ಥರಾದ ಸಿ.ಅನುಪಮ ಅವರು www.stpaulsinstitution.com ವೆಬ್ ಸೈಟ್ ಲೋಕಾರ್ಪಣೆಗೊಳಿಸಿದರು.

ಹಿರಿಯ ಸಿಸ್ಟರ್ ಫ್ಲಾನ್ಸ್‌ಲಿನ್, ಪ್ರೌಢಶಾಲೆಯ ಮುಖ್ಯಸ್ಥರಾದ ಸಿ.ಬರ್ನಿ, ಕನ್ನಡ ಮಾಧ್ಯಮದ ಮುಖ್ಯಸ್ಥರಾದ ಸಿ.ಸುಜಯ, ಇಂಗ್ಲಿಷ್ ಮಾಧ್ಯಮದ ಮುಖ್ಯಸ್ಥರಾದ ಸಿ.ರೀನಿ, ಸಿಬಿಎಸ್‌ಸಿ ವಿಭಾಗದ ಮುಖ್ಯಸ್ಥರಾದ ಸಿ.ನಿರ್ಮಲ ಹಾಗೂ ಹಳೆಯ ವಿದ್ಯಾರ್ಥಿನಿಯರಾದ ಡಾ.ಶುಕ್ಲ, ಶ್ರೀಮತಿ ವಾಸಂತಿ ಪಲ್ಲಾಗಟ್ಟೆ ಇತರರು ಉಪಸ್ಥಿತರಿದ್ದರು.

ಹಿರಿಯ ಶಿಕ್ಷಕಿ ಎಂ.ಕೆ. ಮಂಜುಳ ಸಂಸ್ಥೆ ಹಾಗೂ ವೆಬ್‌ಸೈಟ್ ಕುರಿತು ಮಾತನಾಡಿದರು. ಶಿಕ್ಷಕರಾದ ಎ.ಕಿರಣ್, ಬಿ.ಎಸ್. ರುದ್ರೇಶ್ ಕಾರ್ಯಕ್ರಮ ನಿರ್ವಹಿಸಿದರು. ಎಲಿಜಾ ದೇವರ ವಾಕ್ಯ ನುಡಿದರು. ಭಾಗ್ಯನಾಥನ್ ಪ್ರಾರ್ಥಿಸಿದರು. ವಿದ್ಯಾ ಸ್ವಾಗತಿಸಿದರು. ನಯನ ವಂದಿಸಿದರು.




1946 ರಲ್ಲಿ ಕೇವಲ 6 ವಿದ್ಯಾರ್ಥಿಗಳಿಂದ ಆರಂಭಗೊಂಡ ಈ ಸಂಸ್ಥೆಗೆ ಈಗ 75 ರ ಹರೆಯ. ಇದೀಗ 3 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಶಾಲೆಯಲ್ಲಿ ಓದಿದ ಅನೇಕ ವಿದ್ಯಾರ್ಥಿಗಳು ಶಿಕ್ಷಣ, ಕ್ರೀಡೆ, ಸಮಾಜ ಸೇವೆ, ವೈದ್ಯಕೀಯ, ಪೊಲೀಸ್‌ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಅರ್ಜುನ ಪ್ರಶಸ್ತಿ ವಿಜೇತೆ ಎಂಜಲ್ ಮೇರಿ, ಖೋ-ಖೋ ಪಂದ್ಯದಲ್ಲಿ ರಾಷ್ಟ್ರಮಟ್ಟದಲ್ಲಿ ಖ್ಯಾತಿ ಗಳಿಸಿದ ಆರತಿ, ಹೃದಯ ಮೇರಿ, ಶಾಂತಾ ಪಲ್ಲಾಗಟ್ಟೆ, ಇಸ್ರೋ ವಿಜ್ಞಾನಿ ಡಾ. ಹೇಮಲತಾ, ಡಿಐಜಿ ರೂಪ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆ ಆಯುಕ್ತರಾದ ಪುಟ್ಟಮ್ಮ, ಮುಖ್ಯ ಆಯುಕ್ತ ಮುರುಘ ರಾಜೇಂದ್ರ ಚಿಗಟೇರಿ ಸೇರಿದಂತೆ ಅನೇಕರು ಈ ಶಾಲೆಯ ಹಳೆಯ ವಿದ್ಯಾರ್ಥಿಗಳಾಗಿದ್ದು ಹೆಮ್ಮೆಯ ಸಂಗತಿಯಾಗಿದೆ ಎಂದು ಶಿಕ್ಷಕಿ ಎಂ.ಕೆ. ಮಂಜುಳಾ ವಿವರಿಸಿದರು.

# ವಿಧಾನಸೌಧ ದಲ್ಲಾಳಿಗಳ ಅಡ್ಡಾ : ವಿಶ್ವನಾಥ್

## ಆರ್ಥಿಕ ತಜ್ಞರಲ್ಲದ ಸಿಎಂ ಯಡಿಯೂರಪ್ಪ ಬಳಿ ಹಣಕಾಸು ಇಲಾಖೆ ಏಕೆ?

ಬೆಂಗಳೂರು, ಮಾ. 10 - ಆರ್ಥಿಕ ತಜ್ಞರಲ್ಲದ ನೀವು ಹಣಕಾಸು ಇಲಾಖೆ ಇಟ್ಟುಕೊಂಡಿರುವುದು ಎಷ್ಟು ಸಮಂಜಸ ಎಂದು ಆಡಳಿತ ಪಕ್ಷದ ಹೆಚ್. ವಿಶ್ವನಾಥ್ ಅವರೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಪ್ರಶ್ನಿಸಿದ್ದು, ವಿಧಾನಸೌಧ ದಲ್ಲಾಳಿಗಳ ಅಡ್ಡಾ ಆಗಿದೆ ಎಂದು ಕೂಗೆತ್ತಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಬಜೆಟ್ ಮೇಲೆ ಚರ್ಚೆ ಆರಂಭಿಸಿದ ಬಿಜೆಪಿ ಸದಸ್ಯ ವಿಶ್ವನಾಥ್, ತಮ್ಮ ಭಾಷಣದುದ್ದಕ್ಕೂ ಮುಖ್ಯಮಂತ್ರಿ ಹಾಗು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು, ಪ್ರತಿಪಕ್ಷದ ಸದಸ್ಯರಿಂದ ಮೇಜು ಕುಟ್ಟಿಸಿಕೊಂಡರು.

ನೀವು ಆರ್ಥಿಕ ತಜ್ಞರಲ್ಲ. ಇಲಾಖೆಗೆ ಸಮಯ ಕೊಡಲು ಆಗದಿದ್ದರೂ ಈ ಮಹತ್ವದ ಇಲಾಖೆಯನ್ನು ಏಕೆ ಇಟ್ಟಕೊಂಡಿದ್ದೀರಿ? ಹಿಂದೆ ಸಿದ್ದರಾಮಯ್ಯ, ಕುಮಾರಸ್ವಾಮಿ ಇದೇ ಕೆಲಸವನ್ನು ಮಾಡಿದ್ದರು, ಅದನ್ನೇ ನೀವು ಮಾಡಿದ್ದೀರಿ.

ಎಲ್ಲಾ ಪ್ರಮುಖ ಹುದ್ದೆಗಳು ಮುಖ್ಯಮಂತ್ರಿ ಬಳಿಯೇ ಇದ್ದರೆ ಬೇರೆಯವರಿಗೆ ಏನು ಕೆಲಸ? ಪ್ರಧಾನಿ ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ತಮ್ಮ ಬಳಿ ಇಲಾಖೆಗಳನ್ನೇ ಇಟ್ಟುಕೊಂಡಿರಲಿಲ್ಲ, ಆದರೂ ಎಂತಹ ಅಭಿವೃದ್ಧಿ ರಾಜ್ಯ ಕಟ್ಟಿದರು.

ತಜ್ಞರಲ್ಲದ ಕಾರಣ ಅಧಿಕಾರಿಗಳು ಹೇಳುವ ಸುಳ್ಳನ್ನು ಪುಸ್ತಕ ರೂಪದಲ್ಲಿ ನಿಮ್ಮ ಮೂಲಕ ಹೇಳಿದ್ದನ್ನೇ ಹೇಳಿಸುತ್ತಾರೆ, ಇಂತಹ ಕೆಲಸಗಳಿಗೆ ಹಣಕಾಸು ಇಲಾಖೆ ನಿಮಗೇಕೆ ಬೇಕು? ಕೇಂದ್ರ ಸರ್ಕಾರದ ಮಾದರಿಯಲ್ಲಿ ಬೇರೆಯವರಿಗೆ ಅಧಿಕಾರ ನೀಡಿ ಒಳ್ಳೆಯ ಅಭಿವೃದ್ಧಿ ಕಾರ್ಯಗಳಾಗಲಿ ಎಂದರು.

ಮಧ್ಯಾಹ್ನದ ವೇಳೆ ವಿಧಾನಸೌಧದ ಎಲ್ಲ ಬಾಗಿಲುಗಳನ್ನು ಬಂದ್ ಮಾಡಿ ಒಳಗೆ ಇರುವವರನ್ನೆಲ್ಲ ವಿಚಾರಣೆಗೆ ಒಳಪಡಿಸಿದರೆ ಯಾರು, ಯಾವ ಕೆಲಸಕ್ಕೆ ಬಂದಿದ್ದಾರೆ ಎಂಬುದನ್ನು ತಿಳಿದರೆ ವಿಧಾನಸೌಧದಲ್ಲಿ ನಡೆಯುತ್ತಿರುವ ಲೂಟಿ ಬಗ್ಗೆ ಸ್ಪಷ್ಟತೆ ಸಿಗುತ್ತದೆ, ಈ ವೇಳೆಯಲ್ಲಿ ಮಧ್ಯವರ್ತಿಗಳೇ ಹೆಚ್ಚಾಗಿ ತುಂಬಿರುತ್ತಾರೆ ಎಂದವರು ಇದೇ ಸಂದರ್ಭದಲ್ಲಿ ಆರೋಪಿಸಿದರು.

ಸರ್ಕಾರ ಪ್ರತಿ ವರ್ಷ ನೌಕರರ ವೇತನಕ್ಕಾಗಿ 37,299 ಕೋಟಿ ರೂ.ಗಳನ್ನು, ಪಿಂಚಣಿಗಾಗಿ 22,211 ಕೋಟಿ ರೂ., ಸಾಲದ ಮೇಲಿನ ಬಡ್ಡಿಗಾಗಿ 22,216 ಕೋಟಿ ರೂ., ವಿವಿಧ ಸಬ್ಸಿಡಿಗಳಿಗೆ 24 ಸಾವಿರ ಕೋಟಿ ರೂ. ಸೇರಿದಂತೆ ಹಣ ಖರ್ಚು ಮಾಡುತ್ತಿದೆ.

ಪ್ರತಿ ವರ್ಷ ಸಾಲದ ಪ್ರಮಾಣ ಏರಿಕೆ ಮಾಡುತ್ತಲೇ ಇದ್ದರೆ ಅಭಿವೃದ್ಧಿಗೆ ಹಣ ಎಲ್ಲಿಂದ ತರಬೇಕು? ಸಂಬಳ, ಪಿಂಚಣಿ, ಸಬ್ಸಿಡಿ, ಬಡ್ಡಿಗಾಗಿಯೇ ಬೊಕ್ಕಸ ಖಾಲಿಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರದಲ್ಲಿ ಸುಮಾರು 7 ಲಕ್ಷ ಮಂಜೂರಾತಿ ಹುದ್ದೆಗಳಿವೆ, ಅದರಲ್ಲಿ 5 ಲಕ್ಷ ಮಂದಿ ಕೆಲಸ ಮಾಡುತ್ತಿದ್ದಾರೆ, 2 ಲಕ್ಷ ಹುದ್ದೆಗಳು ಖಾಲಿ ಇವೆ.

ಪಿಂಚಣಿದಾರರು 3 ಲಕ್ಷ ಮಂದಿ ಇದ್ದಾರೆ, ಐಎಎಸ್ ಅಧಿಕಾರಿಗಳಿಗೆ ಸುಮಾರು ಒಂದು ಲಕ್ಷಕ್ಕೂ ಮೇಲ್ಪಟ್ಟು ಪಿಂಚಣಿ ನೀಡುತ್ತಿದ್ದೇವೆ. ನಿವೃತ್ತ ನೌಕರರನ್ನು ಮತ್ತು ಅಧಿಕಾರಿಗಳನ್ನು ಸರ್ಕಾರ ಸರಿಯಾಗಿ ಬಳಸಿಕೊಳ್ಳಬೇಕು ಎಂದು ವಿಶ್ವನಾಥ್ ಹೇಳಿದರು.

## ಅವಧಿ ಮುಗಿದ ಗ್ರಾ.ಪಂ. ಚುನಾವಣಾ ವೇಳಾಪಟ್ಟಿ

ದಾವಣಗೆರೆ, ಮಾ. 10 - ಬರುವ ಮೇ ವೇಳೆಗೆ ಅವಧಿ ಮುಕ್ತಾಯಗೊಳ್ಳಲಿರುವ ದಾವಣಗೆರೆ ತಾಲ್ಲೂಕು ವ್ಯಾಪ್ತಿಗೆ ಒಳಪಟ್ಟ ಬೇತೂರು, ಕನಗೊಂಡನಹಳ್ಳಿ, ಕುಕ್ಕವಾಡ ಹಾಗೂ ಮಾಯಕೊಂಡ ಗ್ರಾಮ ಪಂಚಾಯಿತಿಗಳಿಗೆ ಮಾ.29ರಂದು ಚುನಾವಣೆ ನಡೆಸುವುದಾಗಿ ರಾಜ್ಯ ಚುನಾವಣಾ ಆಯೋಗವು ಪ್ರಕಟಿಸಿದೆ.

ಮಾ.15 ರಂದು ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆ ಹೊರಡಿಸಲಿದ್ದಾರೆ. ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ ಮಾ.19, ನಾಮಪತ್ರ ಪರಿಶೀಲಿಸುವ ದಿನಾಂಕ ಮಾ.20, ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಮಾ.22 ಕೊನೆಯ ದಿನವಾಗಿರುತ್ತದೆ.

ಮಾ.29 ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಯಲಿದ್ದು. ಮಾ.30 ರಂದು ಅಗತ್ಯವಾದರೆ ಮರು ಮತದಾನ ನಡೆಸಲಾಗುವುದು. ಮಾ.31 ರಂದು ಮತ ಎಣಿಕೆ ನಡೆಯಲಿದೆ. ಮಾಯಕೊಂಡ ವಿಧಾನಸಭಾ ಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿ ಹಾಗೂ ತಹಶೀಲ್ದಾರ್ ಬಿ.ಎನ್. ಗಿರೀಶ್ ತಿಳಿಸಿದ್ದಾರೆ.

## ಉಳುಮೆದಾರರಿಗೆ ರಿಯಾಯಿತಿ ದರದಲ್ಲಿ ಖಾತೆಗೆ ಚಿಂತನೆ

ಬೆಂಗಳೂರು, ಮಾ. 10 - ಜಮ್ಮಾಬಾಣೆ, ಕುಮ್ಕಿ ಸೇರಿದಂತೆ ಹಲವು ರೀತಿಯ ಭೂಮಿ ಉಳುಮೆದಾರರಿಗೆ ರಿಯಾಯಿತಿ ದರದಲ್ಲಿ ಖಾತೆ ಮಾಡಿಕೊಡಲು ಚಿಂತನೆ ನಡೆದಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ವಿಧಾನಪರಿಷತ್‌ನಲ್ಲಿ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯೆ ವೀಣಾ ಅಚ್ಚಯ್ಯ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 128 ಮತ್ತು 129ರಂತೆ ಜಮ್ಮಾಬಾಣೆ ಹೆಸರು ರದ್ದುಗೊಳಿಸಿ ವಾರಸುದಾರರ ಹೆಸರಿಗೆ ಖಾತೆ ಮಾಡಿಕೊಡಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಪೌತಿ ಖಾತೆದಾರರ (ಪಟ್ಟೆದಾರರ) ಹೆಸರು ವಜಾಗೊಳಿಸಿ ಅವರ ವಾರಸುದಾರರಿಗೆ ಖಾತೆ ಬದಲಾವಣೆ ಮಾಡಿಕೊಡಲು ಕ್ರಮ ಕೈಗೊಳ್ಳಲಾಗಿದೆ.

ಪಟ್ಟೆದಾರರು ಮೃತಪಟ್ಟಿದ್ದರೆ ಅವರ ವಾರಸುದಾರರು ಮುಖ್ಯ ಸ್ವಾಧೀನದಾರರೊಂದಿಗೆ ಜಂಟಿಯಾಗಿದ್ದಲ್ಲಿ ಅವರ ಹೆಸರಿಗೆ ಪೌತಿ ಖಾತೆ ಮಾಡಿಕೊಡಲು ಅವಕಾಶ ನೀಡಲಾಗಿದೆ ಎಂದರು.

# ಎಸ್ಸೆಸ್ಸೆಲ್ಸಿ ಪರೀಕ್ಷೆ ಸವಾಲಾಗಿ ಸ್ವೀಕರಿಸಿ

## ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದ ಡಿಡಿಪಿಐ ಪರಮೇಶ್ವರಪ್ಪ



ದಾವಣಗೆರೆ, ಮಾ.10- ಇದೇ ಪ್ರಥಮ ಬಾರಿಗೆ ಐದು ತಿಂಗಳಲ್ಲಿ ರಾಜ್ಯ ಮಟ್ಟದ ಎಸ್‌ಎಸ್‌ಎಲ್ ಸಿ ಪಬ್ಲಿಕ್ ಪರೀಕ್ಷೆ ಎದುರಿಸಬೇಕಾಗಿದ್ದು, ಯಾವುದೇ ಭಯ, ಆತಂಕಕ್ಕೆ ಒಳಗಾಗದೇ ಈ ಪರೀಕ್ಷೆಯನ್ನು ಸವಾಲಾಗಿ ಸ್ವೀಕರಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಆರ್. ಪರಮೇಶ್ವರಪ್ಪ ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರು.

ಅವರು, ಇಂದು ನಗರದ ತರಳಬಾಳು ಜಗದ್ಗುರು ಅನುಭವ ಮಂಟಪ ಪ್ರೌಢಶಾಲಾ ಆವರಣದಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ತರಳಬಾಳು ಜಗದ್ಗುರು ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 2020-21ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪೂರ್ವಭಾವಿ ತಯಾರಿ ಉಚಿತ ಕಾರ್ಯಾಗಾರದ ಅಭಿಯಾನ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಕೇವಲ ಐದು ತಿಂಗಳಲ್ಲಿ ಪಠ್ಯವನ್ನು ಮುಗಿಸಿ, ಪರೀಕ್ಷೆಗೆ ಸಿದ್ಧಗೊಳ್ಳುವಂತೆ ಮಾಡಲಾಗುತ್ತಿದೆ. ಸುಮಾರು ಶೇ.30ರಷ್ಟು ಪಠ್ಯ ವಿಷಯಗಳನ್ನು ಕಡಿತಗೊಳಿಸಲಾಗಿದೆ. ಇನ್ನೂ 100 ದಿನ ಮಾತ್ರ ಬಾಕಿ ಉಳಿದಿದ್ದು, ಒಂದೊಂದು ಗಂಟೆ ಒಂದೊಂದು ವಿಷಯಕ್ಕೆ ಮೀಸಲಿಟ್ಟು ಓದಿ ಪರೀಕ್ಷೆಗೆ ತಯಾರಾಗಬೇಕು. ಓದುವುದು, ವಿರಮಿಸುವುದು ಹೀಗೆ 24 ಗಂಟೆಯ ವೇಳಾಪಟ್ಟಿ ಸಿದ್ಧಪಡಿಸಿಕೊಂಡು ಅದರಂತೆಯೇ ಚಾಚೂ ತಪ್ಪದೇ ಪಾಲನೆ ಮಾಡಬೇಕು. ಆಗ ಮಾತ್ರ ಪರೀಕ್ಷೆಯನ್ನು ಸಮರ್ಥವಾಗಿ ಎದುರಿಸಿ ಹೆಚ್ಚಿನ ಫಲಿತಾಂಶ ಪಡೆಯಬಹುದಾಗಿದೆ. ಸವಾಲಾಗಿ ಸ್ವೀಕರಿಸಿದಾಗ ಯಾವುದೂ ಕಷ್ಟವಲ್ಲ. ಸಾಧನೆ ಸಾಧ್ಯವಿದೆ. ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮದೊಂದಿಗೆ ಗುರಿ ತಲುಪುವ ಛಲವಿರಲಿ ಎಂದು ಸಲಹೆ ನೀಡಿದರು.

ಕೇವಲ ಮೂರು ತಾಸಿನ ಪರೀಕ್ಷೆಯಿಂದ ವಿದ್ಯಾರ್ಥಿಯ ಪರಿಪೂರ್ಣ ಜ್ಞಾನವನ್ನು ಅಳೆಯಲು ಅಸಾಧ್ಯ. ಯಾರು ಕೂಡು ದಡ್ಡರಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹ ಬುದ್ಧಿವಂತರೇ. ಪ್ರತಿಭೆ ಕೂಡ ಅಡಗಿದೆ. ಅದನ್ನು ಪೋಷಕರು, ಶಿಕ್ಷಕರು ಗುರುತಿಸುವುದು ಕರ್ತವ್ಯವಾಗಿದೆ. ಅಲ್ಲದೇ ವಿದ್ಯಾರ್ಥಿಗಳಲ್ಲಿ ಸ್ವಪ್ರಯತ್ನವಿರಬೇಕು ಎಂದರು.

**ಪರೀಕ್ಷೆ ಸಮೀಪಿಸಿದಾಗ, ಅಲ್ಪ ಸಮಯದಲ್ಲಿ ಅಧ್ಯಯನ ಮಾಡುವುದಕ್ಕಿಂತ ನಿರಂತರ ಕಲಿಕೆ, ಅಂದಿನ ಪಾಠ ಅಂದೇ ಮನನ ಮಾಡಿಕೊಳ್ಳಬೇಕು. ಕಲಿತ ಪ್ರಮುಖ ವಿಷಯಗಳನ್ನು ಟಿಪ್ಪಣಿ ಮಾಡಿಕೊಂಡು ಪರೀಕ್ಷೆ ವೇಳೆ ಅದನ್ನು ಒಮ್ಮೆ ಮನನ ಮಾಡಿಕೊಳ್ಳಿ. ಜೊತೆಗೆ ಮೂರು-ನಾಲ್ಕು ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡುವುದು ಮುಖ್ಯ. ಕಂಠ ಪಾಠ ಮಾಡುವ ಬದಲು ಪಠ್ಯ ವಿಷಯ ಪುನರ್‌ಮನನ ಮಾಡಿಕೊಳ್ಳಬೇಕು.**

**- ಡಾ. ಹೆಚ್.ವಿ. ವಾಮದೇವಪ್ಪ.**

ನಿವೃತ್ತ ಶಿಕ್ಷಕ ಬಿ. ವಾಮದೇವಪ್ಪ ಮಾತನಾಡಿ, ಜ್ಞಾನ ಸಂಪಾದನೆಗೆ ಕಠಿಣ ಪರಿಶ್ರಮ ಮುಖ್ಯ. ಕಲಿತಷ್ಟು ವಿದ್ಯೆ ಕರಗತವಾಗಲಿದೆ. ಸಮಯವನ್ನು ವ್ಯರ್ಥ ಮಾಡದೇ ಪ್ರಶ್ನೆಗಳಿಗೆ ತಕ್ಕಂತ ಪೂರಕ ಉತ್ತರಗಳನ್ನು ಬರೆಯಬೇಕೆಂದರು.

ಕಲಾಕುಂಚ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಎಸ್.ಬಿ. ರಂಗನಾಥ್ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ಪ್ರಾಚಾರ್ಯರಾದ ಎಂ.ಕೆ. ಪ್ರೇಮ ಕುಮಾರಿ, ಮುಖ್ಯೋಪಾಧ್ಯಾಯ ಎ. ವೆಂಕಟೇಶ್, ಕಲಾಕುಂಚ ಸಂಸ್ಥೆ ಅಧ್ಯಕ್ಷ ಕೆ.ಹೆಚ್. ಮಂಜುನಾಥ, ಜಿ.ಬಿ. ಲೋಕೇಶ್ ಮತ್ತಿತರರಿದ್ದರು. ಎಸ್.ವೀಣಾ ಸ್ವಾಗತಿಸಿದರು. ಸಿಂಚನಾ ನಿರೂಪಿಸಿದರು. ಪಲ್ಲವಿ ವಂದಿಸಿದರು.

# ಲಿಂಗದಹಳ್ಳಿಯಲ್ಲಿ ಬೃಹತ್ ಸ್ಫಟಿಕಲಿಂಗ

ಕಲ್ಲು, ಕಟ್ಟಿಗೆ, ಲೋಹಗಳಲ್ಲಿ ತಯಾರಿಸಲಾದ ಲಿಂಗಗಳು ಜಗತ್ತಿನಲ್ಲಿ ಬಹಳಷ್ಟಿವೆ. ಪಚ್ಚೆಲಿಂಗ, ಸಾಲಿಗ್ರಾಮ, ಸ್ಫಟಿಕ ಲಿಂಗಗಳು ವಿರಳ. ದಕ್ಷಿಣ ಭಾರತದಲ್ಲಿಯೇ ಬೃಹತ್ತಾದ ಸ್ಫಟಿಕ ಲಿಂಗ, ರಾಣೇಬೆನ್ನೂರು ತಾಲ್ಲೂಕಿನ ಲಿಂಗದಹಳ್ಳಿ ಹಿರೇಮಠದಲ್ಲಿದೆ.



ಜಗತ್ತಿನಲ್ಲಿ ಗುರುತಿಸಲಾದ 10 ಬೃಹತ್ ಲಿಂಗಗಳಲ್ಲಿ ಇದೂ ಒಂದು. ಸ್ವಯಂ ಶಿವ ಕಳೆ ಹೊಂದಿರುವ ಮಧ್ಯಪ್ರದೇಶದ ಓಂಕಾರೇಶ್ವರ ಕ್ಷೇತ್ರದ ನರ್ಮದಾ ನದಿಯಲ್ಲಿ ಸಿಗುವ ನರ್ಮದೇಶ್ವರ ಲಿಂಗವು ಇಲ್ಲಿದೆ. ಪುರಾತನ ರಾಮೇಶ್ವರದಲ್ಲಿ ಅತ್ಯಂತ ಚಿಕ್ಕದಾದ ಸ್ಫಟಿಕ ಲಿಂಗವಿದೆ.

ಲಕ್ಷಾಂತರ ವರ್ಷಗಳಿಂದ ಗಟ್ಟಿಯಾದ ಹಿಮಗಡ್ಡೆಯೇ ಸ್ಫಟಿಕವಾಗುತ್ತಿದ್ದು, ಇದು ನಕಾರಾತ್ಮಕ ಶಕ್ತಿಯನ್ನು ನಾಶಪಡಿಸಿ, ಸಕಾರಾತ್ಮಕ ಶಕ್ತಿಯನ್ನು ಹೆಚ್ಚಿಸುವ ಅಧ್ಯಾತ್ಮಿಕ ಶಕ್ತಿ ಹೊಂದಿದೆ. ಮಾನಸಿಕ ಮತ್ತು ದೈಹಿಕ ಆರೋಗ್ಯ ವೃದ್ಧಿಸುವ, ದೇಹದ ಉಷ್ಣತೆಯನ್ನು ತಗ್ಗಿಸಿ ಸಮತೋಲನ ಕಾಪಾಡುವ ವೈಜ್ಞಾನಿಕ ಸಾಮರ್ಥ್ಯ ಇದರಲ್ಲಿರುವುದರಿಂದ ಸಾಧು-ಸಂತರು, ಸ್ವಾಮೀಜಿಗಳು, ಯೋಗಿಗಳು ಸ್ಫಟಿಕ ಮಾಲೆ ಧರಿಸಿ ಜಪ, ಧ್ಯಾನ ಮಾಡುತ್ತಾರೆ. ಸ್ಫಟಿಕ ಲಿಂಗದ ದರ್ಶನ ಹಾಗೂ ಸ್ಪರ್ಶದಿಂದ, ಸೂರ್ಯೋದಯ, ಸೂರ್ಯಾಸ್ತದ ಸಮಯದಲ್ಲಿ ಪೂಜೆ ಮಾಡಿದರೆ ಸರ್ವ ಬೇಡಿಕೆಗಳು ಈಡೇರುತ್ತವೆ ಎನ್ನುವ ನಂಬಿಕೆ ಇದೆ. ಇಲ್ಲಿ ಸರ್ವ ಸಮಾಜದ ಜನರಿಗೂ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

**ಹಿರೇಮಠದ ವಂಶಾವಳಿ.....**

8 ನೇ ಶತಮಾನದಲ್ಲಿ ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಎಳಮಲಿ ಗ್ರಾಮದಿಂದ ಬಂದು ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬರ ಹಳ್ಳಿಯಲ್ಲಿದ್ದ ಹಿರೇಮಠ ಮನೆತನದವರು 15 ನೇ ಶತಮಾನದಲ್ಲಿ ಲಿಂಗದಹಳ್ಳಿಗೆ ವಲಸೆ ಬಂದು ಪೂರ್ವಿಕರಿಂದ ಲಭ್ಯವಾಗಿದ್ದ ಸ್ಫಟಿಕ ಲಿಂಗವನ್ನು ಇಲ್ಲಿ ಪ್ರತಿಷ್ಠಾಪಿಸಿದರು. ವಂಶಾವಳಿಯಂತೆ ಪೂಜೆ ಮುಂತಾದ ಧಾರ್ಮಿಕ ವಿಧಿ,ವಿಧಾನಗಳನ್ನು ಆಚರಿಸಿಕೊಂಡಿದ್ದಾರೆ.

ವೇ.ಮೂ. ಚನ್ನಮಲ್ಲಪ್ಪ ಹಾಗೂ ಚನ್ನಮ್ಮನವರ ಪುಣ್ಯಗರ್ಭದಲ್ಲಿ ಜನಿಸಿದ ಇಂದಿನ ಪೀಠಾಧಿಪತಿ ಶ್ರೀ ವೀರಭದ್ರ ಸ್ವಾಮಿಗಳು ಸನ್ಯಾಸತ್ವ ಸ್ವೀಕರಿಸಿ ತಮ್ಮನ್ನು ಸಮಾಜ ಸೇವೆಗೆ ಮುಡುಪಾಗಿಸಿದ್ದಾರೆ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಈಗಲೂ ಸೇವೆ ಸಲ್ಲಿಸುತ್ತಿದ್ದು, ತಮ್ಮ ಸ್ವಂತ ಜಮೀನು, ಜೊತೆಗೆ ತಮ್ಮ ದುಡಿಮೆಯ ಎಲ್ಲವನ್ನು ಭಕ್ತರ ಸೇವೆ ಹಾಗೂ ಮಠದ ಅಭಿವೃದ್ಧಿಗಾಗಿ ಮೀಸಲಿಟ್ಟಿದ್ದಾರೆ. ಭಕ್ತ ವರ್ಗದ ಪ್ರೀತಿ ಸಂಪಾದಿಸಿದ್ದಾರೆ.

**ಇಂದು ವಿಶೇಷ ಪೂಜೆ:** ಮಹಾಶಿವರಾತ್ರಿ ನಿಮಿತ್ತ ಇಂದು ಸ್ಫಟಿಕ ಶಿವಲಿಂಗಕ್ಕೆ ಮಹಾರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಅಷ್ಟೋತ್ತರ ಸೇವೆ, ಶಿವ ಭಜನೆ, ಮಹಾರುದ್ರಯಾಗ, ಶಿವನಾಮ ಸಂಕೀರ್ತನೆ, ಬಿಲ್ವಾರ್ಚನೆ ಸೇರಿದಂತೆ ವಿಶೇಷ ಶಿವಪೂಜಾ ಕಾರ್ಯಕ್ರಮಗಳು ಇಂದು ಸಂಜೆ 6.30 ಕ್ಕೆ ನೆರವೇರಲಿವೆ.

## ಸಾರಿಗೆಯಲ್ಲಿ ಅಂತರ್ ನಿಗಮ ವರ್ಗಾವಣೆ : ಸವದಿ

ಬೆಂಗಳೂರು, ಮಾ. 10 - ಸಾರಿಗೆ ನೌಕರರ ಬೇಡಿಕೆಗಳಿಗೆ ಸ್ಪಂದಿಸಿರುವ ರಾಜ್ಯ ಸರ್ಕಾರ ಅಂತರ್ ನಿಗಮ ವರ್ಗಾವಣೆಗೆ ಅವಕಾಶ ಮಾಡಿಕೊಟ್ಟಿದೆ.

ಅಂತರ್ ನಿಗಮ ವರ್ಗಾವಣೆ ಸೇರಿದಂತೆ, ನೌಕರರ ಕೆಲವು ಪ್ರಮುಖ ಬೇಡಿಕೆಗಳನ್ನು ಈಡೇರಿಸಿ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಪತ್ರಿಕಾ ಹೇಳಿಕೆಯಲ್ಲಿ ಈ ಮಾಹಿತಿ ನೀಡಿರುವ ಸಾರಿಗೆ ಇಲಾಖೆ ಹೊಣೆ ಹೊತ್ತ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಅಂತರ್ ನಿಗಮ ವರ್ಗಾವಣೆ ಪ್ರಕ್ರಿಯೆಯು ಒಂದು ಬಾರಿಗೆ ಮಾತ್ರವಲ್ಲದೆ, ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ವರ್ಗಾವಣೆಗೆ ಅವಕಾಶವಿದೆ ಎಂದು ಹೇಳಿದ್ದಾರೆ.

ಪ್ರತಿ ವರ್ಷ ಶೇ. 2ರಷ್ಟು ಸಿಬ್ಬಂದಿಗಳು ಇದರ ಸೌಲಭ್ಯ ಪಡೆಯಬಹುದು, ಆದರೆ, ಅವರು ಕನಿಷ್ಟ 10 ವರ್ಷ ಖಾಯಂ ನೌಕರರಾಗಿ ಸೇವೆ ಸಲ್ಲಿಸಿರಬೇಕು ಎಂದರು.

ವರ್ಗಾವಣೆ ಬಯಸುವವರು ನಿಗಮದ ಆನ್‌ಲೈನ್ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಬೇಕು, ಒಂದು ಬಾರಿ ಶಾಶ್ವತ ವರ್ಗಾವಣೆ ಸೌಲಭ್ಯ ಪಡೆದ ನಂತರ ಮತ್ತೆ ಬದಲಾವಣೆಗೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು.

## ಇಂದು 'ಶಿವಸ್ಮರಣೆ' ನೃತ್ಯ ಜಾಗರಣೆ

ದಾವಣಗೆರೆಯ ನಮನ ಅಕಾಡೆಮಿ ವತಿಯಿಂದ ಮಹಾ ಶಿವರಾತ್ರಿ ಪ್ರಯುಕ್ತ ಇಂದು ರಾತ್ರಿ 9 ರಿಂದ ಬೆಳಗಿನಜಾವ 3 ಗಂಟೆಯವರೆಗೆ ನಗರದ ವಿವಿಧ ಭಾಗಗಳಲ್ಲಿ 'ಶಿವಸ್ಮರಣೆ' ನೃತ್ಯ ಜಾಗರಣೆ ಕಾರ್ಯಕ್ರಮ ನಡೆಯಲಿದೆ.

ರಾತ್ರಿ 9 ಕ್ಕೆ ರಿಂಗ್ ರಸ್ತೆಯಲ್ಲಿನ ಶ್ರೀ ಶಾರದಾ ಮಂದಿರದಲ್ಲಿ 'ಶಿವಸ್ಮರಣೆ' ನೃತ್ಯ ಜಾಗರಣೆ ಕಾರ್ಯಕ್ರಮಕ್ಕೆ ಡಾ. ಬಿ.ಟಿ. ಅಚ್ಯುತ್, ಡಾ. ಎ.ಎಂ. ಶಿವಕುಮಾರ್ ಹಾಗೂ ದಿನೇಶ್ ಕೆ. ಶೆಟ್ಟಿ ಚಾಲನೆ ನೀಡಲಿದ್ದಾರೆ ಎಂದರು.

ನಂತರ 11 ಗಂಟೆಗೆ ಜಯದೇವ ವೃತ್ತದ ಬಳಿ ಇರುವ ಕೂಡಲಿ ಶಂಕರ ಮಠದಲ್ಲಿ, ತದನಂತರ ರಾತ್ರಿ 12.30 ಕ್ಕೆ ಗೀತಾಂಜಲಿ ಚಿತ್ರಮಂದಿರದ ಪಕ್ಕದಲ್ಲಿರುವ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಕೊನೆಯದಾಗಿ ವಿದ್ಯಾನಗರದ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ರಾತ್ರಿ 2 ಗಂಟೆಗೆ ಶಿವನಿಗೆ ನೃತ್ಯ ಸಮರ್ಪಣೆ ಮಾಡುವುದಾಗಿ ತಿಳಿಸಿದರು.

## ಮುಜರಾಯಿ ದೇವಸ್ಥಾನಗಳಿಗೆ ಕಾಶಿ ಗಂಗೆ ವಿತರಣೆ



ಹರಿಹರ, ಮಾ.10- ಕಾಶಿಯಿಂದ ಬಂದಂತಹ ಪವಿತ್ರ ಗಂಗಾಜಲವನ್ನು ಮುಜರಾಯಿ ದೇವಸ್ಥಾನಗಳಾದ ಶ್ರೀ ಹರಿಹರೇಶ್ವರ ಸ್ವಾಮಿ ದೇವಸ್ಥಾನ, ಬಸವೇಶ್ವರ ದೇವಸ್ಥಾನ, ಶ್ರೀ ಕಲ್ಲೇಶ್ವರ ದೇವಸ್ಥಾನ, ಏಕನಾಥೇಶ್ವರಿ ದೇವಸ್ಥಾನ ಸೇರಿದಂತೆ ಇತರೆ ದೇವಸ್ಥಾನಗಳಿಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪರೀಕ್ಷಾರ್ಥ ಉಪವಿಭಾಗಾಧಿಕಾರಿ ದುರ್ಗಾಶ್ರೀ, ಪರೀಕ್ಷಾರ್ಥ ತಹಶೀಲ್ದಾರ್ ಸಂಜನಾ ಹಾಗೂ ಕಚೇರಿ ಸಿಬ್ಬಂದಿಗಳಾದ ಭಾರತಿ, ಭೀಮೇಶ್, ಸೋಮಣ್ಣ, ಸೌಮ್ಯ ಸಂತೋಷ್, ಕಿರಣ್ ರಾಜಸ್ವ ನಿರೀಕ್ಷಕ ಸಮೀರ್, ಮುಜರಾಯಿ ವಿಷಯ ನಿರ್ವಾಹಕ ಸಂಗೀತ ಕೆ. ಜೋಶಿ ಉಪಸ್ಥಿತರಿದ್ದರು.

# ಭದ್ರಾ ನಾಲಾ ನಂ.3 ವಿಭಾಗದ ಇಇ ಕಚೇರಿ ಸ್ಥಳಾಂತರ ಮಾಡಿದರೆ ಕೊನೆ ಭಾಗದ ರೈತರಿಗೆ ತೊಂದರೆ : ಪವಿತ್ರ

ಮಲೇಬೆನ್ನೂರು, ಮಾ.10- ಪಟ್ಟಣದಲ್ಲಿರುವ ಭದ್ರಾ ನಾಲಾ ನಂ.3 ವಿಭಾಗದ ಕಾರ್ಯಪಾಲಕ ಅಭಿಯಂತರರ ಕಚೇರಿಯನ್ನು ಹೊನ್ನಾಳಿಗೆ ಸ್ಥಳಾಂತರ ಮಾಡಲು ಬಿಡುವುದಿಲ್ಲ. ಬೇಕಾದರೆ ಹೊನ್ನಾಳಿಗೆ ಹೊಸ ಇಇ ಕಚೇರಿಯನ್ನು ಮಂಜೂರು ಮಾಡಿಸಿಕೊಳ್ಳಲಿ ಎಂದು ಭದ್ರಾ ಕಾಡಾ ಅಧ್ಯಕ್ಷೆ ಶ್ರೀಮತಿ ಪವಿತ್ರ ರಾಮಯ್ಯ ಹೇಳಿದರು.

ಇಲ್ಲಿನ ನೀರಾವರಿ ಕಚೇರಿಗೆ ಬುಧವಾರ ಭೇಟಿ ನೀಡಿದ ಸಂದರ್ಭದಲ್ಲಿ ಎಪಿಎಂಸಿ ಸದಸ್ಯ ಜಿ.ಮಂಜುನಾಥ್ ಪಟೇಲ್ ಬಿ. ವೀರಯ್ಯ, ರೈತ ಸಂಘದ ಸಿರಿಗೆರೆ ಪಾಲಾಕ್ಷಪ್ಪ, ನಂದಿತಾವರೆ ಮುರುಗೇಂದ್ರಯ್ಯ ಅವರು ಭದ್ರಾ ನಾಲಾ ನಂ.3 ವಿಭಾಗದ ಇಇ ಕಚೇರಿಯನ್ನು ಸ್ಥಳಾಂತರ ಮಾಡದಂತೆ ನೀಡಿದ ಮನವಿ ಪತ್ರವನ್ನು ಸ್ವೀಕರಿಸಿ ಅವರು ಮಾತನಾಡಿದರು.



ಮಲೇಬೆನ್ನೂರು ಭಾಗಕ್ಕೆ ಈ ಕಚೇರಿ ಬಹಳ ಅವಶ್ಯವಿದ್ದು, ಯಾವುದೇ ಕಾರಣಕ್ಕೂ ಬೇರೆಡೆಗೆ ಸ್ಥಳಾಂತರ ಮಾಡಲು ನೀವೂ ಬಿಡಬೇಡಿ. ನಾನು ಬಿಡುವುದಿಲ್ಲ. ಭದ್ರಾ ಅಚ್ಚುಕಟ್ಟಿನ ಅತಿ ಹೆಚ್ಚು ಕೊನೆ ಭಾಗ ಹೊಂದಿರುವ ಈ ಕಚೇರಿಯನ್ನು ಬೇರೆಡೆಗೆ ಸ್ಥಳಾಂತರಿಸಿದರೆ ಈ ಭಾಗದ ರೈತರಿಗೆ ಬಹಳ ತೊಂದರೆಯಾಗಲಿದೆ. ಈ ವಿಷಯದ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ನೀರಾವರಿ ನಿಗಮದ ಎಂಡಿ ಜೊತೆ ಚರ್ಚಿಸುತ್ತೇನೆಂದು ಪವಿತ್ರ ಭರವಸೆ ನೀಡಿದರು.

ಜಿ.ಪಂ. ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ, ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ಸಿರಿಗೆರೆ ತಿಪ್ಪೇರುದ್ರಪ್ಪ, ಪ್ರಭು, ಪುರಸಭೆ ಸದಸ್ಯರಾದ ಪಿ.ಆರ್. ರಾಜು, ಹೆಚ್.ಜಿ.ಮಂಜಪ್ಪ, ಟಿ.ವಾಸಪ್ಪ ಮತ್ತು ಜಿಗಳಿಯ ಚಂದ್ರಪ್ಪ, ಹನುಮಗೌಡ, ಮಲೇಬೆನ್ನೂರಿನ ಬಿ.ಮಂಜುನಾಥ್, ಪೂಜಾರ್ ಹಾಲೇಶ್, ಮಂಜುನಾಥ್ ಈ ವೇಳೆ ಹಾಜರಿದ್ದರು.


## ಕೆನರಾ ಬ್ಯಾಂಕ್ ಅಣಬೂರು ಶಾಖೆ

ಕೆನರಾ ಬ್ಯಾಂಕ್ Canara Bank

### ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ

### ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕೆನರಾ ಬ್ಯಾಂಕ್ ಅಣಬೂರು ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲ ಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು : 18.03.2021 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು, ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 26.03.2021ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ. ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

| ಕ್ರ.ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು+ಬಡ್ಡಿ |
|---|---|---|---|
| 01 | ಸಿರಿಯಪ್ಪ ಬಿನ್ ದೊಡ್ಡ ಈರಪ್ಪ, ಅಣಬೂರು ಗೊಲ್ಲರಹಟ್ಟಿ | 1847842000259 | 25650 |
| 02 | ಹನುಮಂತಪ್ಪ ಬಿನ್ ಪಲ್ಲಯ್ಯ, ತಮಲಿಹಳ್ಳಿ | 1847842000872 | 45400 |
| 03 | ರಮೇಶ್ ಡಿ. ಬಿನ್ ದ್ಯಾಮಪ್ಪ, ಹನುಮಂತಾಪುರ | 1847842000523 | 40400 |
| 04 | ರತ್ನಮ್ಮ ಬಿನ್ ಶಿವಣ್ಣ, ಹನುಮನಾಗ್ತಿಹಳ್ಳಿ | 1847842000243 | 24700 |
| 05 | ಸೇವಾ ನಾಯ್ಕ್ ಬಿನ್ ನಾನಾನಾಯಕ್, ಗಾಂಧಿನಗರ | 1847842000888 | 6600 |
| 06 | ಅಂಜಿನಪ್ಪ ಸಿ. ಬಿನ್, ಚೌಡಪ್ಪ, ಮಾರಿಕಟ್ಟೆ, ಕ್ಯಾಸೇನಹಳ್ಳಿ ಪಿ. | 1847842000879 | 25300 |
| 07 | ಗುಡ್ಡಪ್ಪ ಬಿನ್ ಈರಕಾಟಪ್ಪ, ಅಣಬೂರು ಗೊಲ್ಲರಹಟ್ಟಿ | 1847842000738 | 18000 |
| 08 | ಹನುಮಂತಪ್ಪ ಜಿ.ಬಿ. ಬಿನ್ ಬೋರಪ್ಪ, ದೊಡ್ಡಬೊಮ್ಮನಹಳ್ಳಿ. | 1847842000788 | 20200 |
| 09 | ಮಂಜಮ್ಮ ಕೋಂ. ಈರಪ್ಪ ತಮಲಿಹಳ್ಳಿ. | 1847842000903 | 25300 |
| 10 | ಗುಡ್ಡಪ್ಪ ಬಿನ್ ಈರಕಾಟಪ್ಪ, ಅಣಬೂರು ಗೊಲ್ಲರಹಳ್ಳಿ | 1847842000893 | 8142 |
| 11 | ರಾಮಸ್ವಾಮಿ ನಾಯಕ್ ಬಿನ್ ನರಸಿಂಗ ನಾಯ್ಕ, ಜ್ಯೋತಿಪುರ | 1847842000662 | 60200 |
| 12 | ಜಯ ನಾಯ್ಕ ಬಿನ್ ಕುಬ್ಯಾ ನಾಯ್ಕ, ಗಾಂಧಿನಗರ | 1847842000602 | 40000 |
| 13 | ಪಾಲಯ್ಯ ಎಸ್. ಬಿನ್ ಸಣ್ಣಹನುಮಂತಪ್ಪ, ತಮಲಿಹಳ್ಳಿ | 1847842000668 | 55400 |
| 14 | ಜಂಪಮ್ಮ ಕೋಂ. ಬಡ ನಾಗಪ್ಪ, ಹನುಮಂತಾಪುರ, ಗೊಲ್ಲರಹಟ್ಟಿ | 1847842000851 | 9100 |
| 15 | ತಿಮ್ಮಕ್ಕ ಕೋಂ. ಈರಪ್ಪ, ಅಣಬೂರು ಗೊಲ್ಲರಹಟ್ಟಿ, ಜಗಳೂರು ತಾ. | 1847842001627 | 12000 |

ಸ್ಥಳ : ಜಗಳೂರು.
ದಿನಾಂಕ : 10.03.2021

ಸಹಿ/- ಮ್ಯಾನೇಜರ್
ಕೆನರಾ ಬ್ಯಾಂಕ್ ಅಣಬೂರು ಶಾಖೆ

# ಮೂತ್ರಪಿಂಡ (ಕಿಡ್ನಿ) ಸುರಕ್ಷತೆ ನಮ್ಮೆಲ್ಲರ ಜವಾಬ್ದಾರಿ...



**ಮೂತ್ರಪಿಂಡಗಳು ಮಾನವನ ದೇಹದಲ್ಲಿನ ಬಹಳ ಮುಖ್ಯವಾದ ಅಂಗ, ದೇಹದಲ್ಲಿನ ಎಲ್ಲ ಕಾರ್ಯಗಳು ಸುಗಮವಾಗಿ ನಡೆಯಲು ಮೂತ್ರಪಿಂಡಗಳು ಸಾಕಷ್ಟು ಕೊಡುಗೆ ನೀಡುತ್ತವೆ. ಈಗಿನ ಜನರ ಜೀವನ ಶೈಲಿ ಬದಲಾಗುತ್ತಿರುವ ಪರಿಣಾಮಗಳ ದೃಷ್ಟಿಯಿಂದ, ಜನರಿಗೆ ಮೊದಲಿಗಿಂತ ಹೆಚ್ಚು ಮೂತ್ರಪಿಂಡದ ತೊಂದರೆಗಳು ಕಾಣಿಸಲು ಪ್ರಾರಂಭವಾಗಿವೆ.**

ಮೂತ್ರಪಿಂಡಗಳು ತಮ್ಮ ಕಾರ್ಯ ನಿರ್ವಹಿಸಲು ಅಸಮರ್ಥವಾದ ಸ್ಥಿತಿಯನ್ನು 'ಮೂತ್ರಪಿಂಡ ವೈಫಲ್ಯ' ಎನ್ನಲಾಗುತ್ತದೆ. ಮೂತ್ರದ ಮೂಲಕ ವಿಸರ್ಜನೆಗೊಳ್ಳಬೇಕಾದ ಹಾನಿಕಾರಕ ದ್ರವ್ಯಗಳು ರಕ್ತದಲ್ಲಿಯೇ ಉಳಿದು ದೇಹದ ನಾನಾ ಅಂಗಗಳ ಕೆಲಸದ ಮೇಲೆ ದುಷ್ಪರಿಣಾಮ ಬೀರುತ್ತವೆ. ಮೂತ್ರಪಿಂಡಗಳು ಶರೀರದ ಅಗತ್ಯಕ್ಕಿಂತಲೂ ಹೆಚ್ಚಿನ ಸಾಮರ್ಥ್ಯ ಹೊಂದಿರುತ್ತವೆ. ಅವುಗಳ ಕಾರ್ಯಕ್ಷಮತೆಯಲ್ಲಿ ಶೇಕಡ 50ಕ್ಕಿಂತಲೂ ಹೆಚ್ಚು ನಷ್ಟವಾಗುವವರೆಗೆ ಅವು ವಿಫಲವಾಗುತ್ತಿವೆಯೆಂಬುದು ತಿಳಿಯುವುದೇ ಇಲ್ಲ. ಮೂತ್ರಪಿಂಡದ ಕಾರ್ಯವು ಸಹಜ ಸ್ಥಿತಿಗೆ ಹೋಲಿಸಿದರೆ ಶೇಕಡ 5 ಅಥವಾ 10ರ ಮಟ್ಟವನ್ನು ತಲುಪಿದರೆ ಜೀವಕ್ಕೆ ಅಪಾಯವಾಗಬಹುದು. ಸಾಮಾನ್ಯವಾಗಿ ಮೂತ್ರಪಿಂಡ ವೈಫಲ್ಯಕ್ಕೆ ಕಾರಣವಾದ ರೋಗಗಳು ಎರಡೂ ಮೂತ್ರಪಿಂಡಗಳ ಮೇಲೆ ಪ್ರಭಾವ ಬೀರುತ್ತವೆ. ಎರಡೂ ಮೂತ್ರ ಪಿಂಡಗಳು ವಿಫಲವಾದಾಗಲೇ ಮೂತ್ರಪಿಂಡ ವೈಫಲ್ಯ ಎಂದು ಕರೆಯಲಾಗುತ್ತದೆ.

ಜನ-ಸಾಮಾನ್ಯರ ಆರೋಗ್ಯದಲ್ಲಿ ಮೂತ್ರ ಪಿಂಡಗಳ ಪ್ರಾಮುಖ್ಯತೆ, ಅದಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ತಡೆಗಟ್ಟುವ ಮಾಹಿತಿ ಬಗ್ಗೆ ಜಾಗೃತಿ ಮೂಡಿಸಲು ವಿಶ್ವದಾದ್ಯಂತ ಪ್ರತಿ ವರ್ಷ ಮಾರ್ಚ್ ಎರಡನೇ ಗುರುವಾರವನ್ನು 'ವಿಶ್ವ ಮೂತ್ರಪಿಂಡ ದಿನ' ವೆಂದು ಆಚರಿಸಲಾಗುತ್ತಿದೆ.

ಮೂತ್ರಪಿಂಡಗಳ ಕೆಲಸದಲ್ಲಿ ನ್ಯೂನತೆ ಹೆಚ್ಚಾದಂತೆ ಶರೀರದ ಬಾವು, ರಕ್ತಹೀನತೆ, ಸುಸ್ತು, ಆಯಾಸ, ರಕ್ತದ ಏರೊತ್ತಡ, ವಾಂತಿ, ಉಬ್ಬಳಿಕೆ, ಹಸಿವು ಕಡಿಮೆಯಾಗುವುದು ಮುಂತಾದ ತೊಂದರೆಗಳು ಕಾಣಿಸಿಕೊಳ್ಳುತ್ತವೆ.

**ಮೂತ್ರಪಿಂಡ ವೈಫಲ್ಯದಲ್ಲಿ ಎರಡು ಬಗೆಗಳಿವೆ :**

* ತಾತ್ಕಾಲಿಕವಾದ ತೀವ್ರ ರೂಪದ ಮೂತ್ರಪಿಂಡ ವೈಫಲ್ಯ (Acute renal failure) - ಇದು ತಾತ್ಕಾಲಿಕವಾಗಿದ್ದು, ಸ್ವಲ್ಪ ಸಮಯ ಮಾತ್ರ ಇರುತ್ತದೆ. ಕಿಡ್ನಿ ಕೆಲಸ ಕ್ರಮೇಣ ಸಹಜ ಸ್ಥಿತಿಗೆ ಬರುತ್ತದೆ. ನಂತರ ಡಯಾಲಿಸಿಸ್ ಅವಶ್ಯಕತೆ ಇರುವುದಿಲ್ಲ.

* ದೀರ್ಘಕಾಲದ ಅಥವಾ ಶಾಶ್ವತ ಮೂತ್ರಪಿಂಡ ವೈಫಲ್ಯ (Chronic renal failure) - ನಿಧಾನವಾಗಿ ಕೆಲವೊಂದು ವರ್ಷಗಳಲ್ಲಿ ಎರಡೂ ಮೂತ್ರ ಪಿಂಡಗಳು ನಿಷ್ಕ್ರಿಯವಾಗುತ್ತವೆ. ಕಿಡ್ನಿ ಕೆಲಸ ಸಹಜ ಸ್ಥಿತಿಗೆ ಬರುವ ಸಾಧ್ಯತೆ ಶೂನ್ಯ.

ಪ್ರಾರಂಭದ ಹಂತದಲ್ಲಿ ಔಷಧಿಗಳ ಸಹಾಯದಿಂದ ಕಾಯಿಲೆಯನ್ನು ಹತೋಟಿಯಲ್ಲಿಡಬಹುದು ಮತ್ತು ರೋಗದ ಬಾಧೆ ಅಷ್ಟೊಂದು ಕಾಡುವುದಿಲ್ಲ. ಹಲವಾರು ತಿಂಗಳು ಅಥವಾ ವರ್ಷಗಳ ನಂತರ ಕಿಡ್ನಿಯ ಕೆಲಸ ಕ್ರಮೇಣ ಶೇ.10 ಕ್ಕೂ ಕಡಿಮೆಯಾಗುತ್ತದೆ. ಈ ಅಂತಿಮ ಹಂತದಲ್ಲಿ ಆಜೀವ ಪರ್ಯಂತ ಡಯಾಲಿಸಿಸ್ (ರಕ್ತ ಶುದ್ಧೀಕರಣ) ಅಥವಾ ಹೊಸ ಮೂತ್ರಪಿಂಡ ಕಸಿ ಮಾಡುವುದು (Kidney Transplantation) ಒಂದೇ ಮಾರ್ಗ. ಎರಡೂ ಚಿಕಿತ್ಸಾ ಮಾರ್ಗಗಳು ಬಲು ದುಬಾರಿ. ಡಯಾಲಿಸಿಸ್‌ನಲ್ಲಿ ರಕ್ತವನ್ನು ಕೃತಕ ಫಿಲ್ಟರ್ ಸಹಾಯದಿಂದ ಶುದ್ಧೀಕರಿಸಲಾಗುತ್ತದೆ. ಪ್ರತಿ 3 ಅಥವಾ 4 ದಿನಗಳಿಗೊಮ್ಮೆ ಡಯಾಲಿಸಿಸ್ ಮಾಡಿಸಿಕೊಳ್ಳಬೇಕಾಗುತ್ತದೆ. ಮೂತ್ರಪಿಂಡ ಕಸಿ ಕೂಡ ಬಹಳ ದುಬಾರಿ ಚಿಕಿತ್ಸೆ. ಕಸಿ ಮಾಡಿದ ನಂತರವೂ ವ್ಯಕ್ತಿ ಜೀವನ ಪರ್ಯಂತ ಕೆಲವು ಔಷಧಗಳನ್ನು ಸೇವಿಸುತ್ತಲೇ ಇರಬೇಕು. ಜತೆಗೆ ಕಸಿ ಮಾಡಿದ ಮೂತ್ರಪಿಂಡ ಕಾಲ ಕ್ರಮೇಣ (ಹಲವು ವರ್ಷಗಳ ನಂತರ) ಕೆಲಸ ಮಾಡದಿರುವ ಸಾಧ್ಯತೆ ಇರುತ್ತದೆ. ಹಾಗಾಗಿ ಸಮಸ್ಯೆ ಬರದಂತೆ ತಡೆಗಟ್ಟುವುದು ಅಥವಾ ಆರಂಭಿಕ ಹಂತದ ಚಿಕಿತ್ಸೆ ಹೆಚ್ಚು ಸೂಕ್ತ.

ಮೂತ್ರಪಿಂಡ ಅಥವಾ ನಾಳದಲ್ಲಿ ಕಲ್ಲುಗಳಿದ್ದರೆ ಸೂಕ್ತ ಚಿಕಿತ್ಸೆ ಪಡೆಯಬೇಕು. ಕಲ್ಲುಗಳು ಮೂತ್ರ ಹರಿಯುವ ದಾರಿಯಲ್ಲಿ ತಡೆ ಉಂಟು ಮಾಡುವುದರಿಂದ, ಸೋಂಕು ಉಂಟಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಸೋಂಕು ಪದೇ-ಪದೇ ಪುನರಾವರ್ತನೆಯಾದರೆ, ಕಿಡ್ನಿಯ ಕಾರ್ಯಕ್ಷಮತೆ ಕುಂಠಿತಗೊಳ್ಳುತ್ತದೆ. ಪಾಲಿಸಿಸ್ಟಿಕ್ ಕಿಡ್ನಿಗಳಿರುವ ವ್ಯಕ್ತಿ ಮತ್ತು ಅವರ ಮಕ್ಕಳು ಮೂತ್ರದ ಮತ್ತು ರಕ್ತದ ಕ್ರಮಬದ್ಧ ತಪಾಸಣೆ ಮಾಡಿಸಿಕೊಳ್ಳಬೇಕು. ಪ್ರೊಸ್ಟೇಟ್‌ಗ್ಲ್ಯಾಂಡ್ ಗಾತ್ರದಲ್ಲಿ ದೊಡ್ಡದಾಗಿದ್ದರೆ ಸೂಕ್ತ ಚಿಕಿತ್ಸೆ ಪಡೆಯಬೇಕು.

**- ಡಾ. ಪ್ರಮೋದ್ ಜಿ.ಆರ್.**
ಕಿಡ್ನಿ ರೋಗ ತಜ್ಞರು
ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ
ದಾವಣಗೆರೆ.

## ಶಿವರಾತ್ರಿ

ಭಕ್ತರ ನಿಷ್ಕಲ್ಮಶ ಭಕ್ತಿಗೊಲಿಯುತ
ಮುಕ್ತಿಯ ಕರುಣಿಸುವ ಮಹಾದೇವ
ದುಷ್ಟ ದುರುಳ ನಾಸ್ತಿಕರ ಸಂಹರಿಸುತ
ಶಿಷ್ಟರ ಸದಾ ಪೊರೆಯುವ ಪರಮಶಿವ.

ಶಿಶಿರ ಋತುವಿನ ಮಾಘ ಮಾಸದಿ
ಕೃಷ್ಣ ಪಕ್ಷದ ಚತುರ್ದಶಿಯ ದಿನದಿ
ತನುಮನ ಶುದ್ಧಿಯಲಿ ಉಪವಾಸದಿ
ಶಿವನಾಮವ ಸ್ಮರಿಸುವರು ಮಂದಿ.

ದೇವರ ದೇವ ಮಹಾದೇವನೊಲಿಸಲು
ಉಪವಾಸ, ಜಾಗರಣೆ ಮಾಡಿರೆನ್ನುವ ರಾತ್ರಿ
ಮನದಂಧಕಾರವ ಕಳೆದು ಸನ್ಮಾರ್ಗದಲಿ
ಮಾನವರ ನಡೆಸುವ ಮಂಗಳಕರ ಶಿವರಾತ್ರಿ.

**-ಶಿವಮೂರ್ತಿ.ಹೆಚ್.**, ಕನ್ನಡ ಶಿಕ್ಷಕರು
ಶ್ರೀ ತರಳಬಾಳು ಜಗದ್ಗುರು ರೆಸಿಡೆನ್ಸಿಯಲ್ ಸ್ಕೂಲ್
ಅನುಭವ ಮಂಟಪ, ದಾವಣಗೆರೆ.

## ಕಾಯಕ ಶರಣರ ಜಯಂತಿ

ಇಂದು ಬೆಳಿಗ್ಗೆ 11.30 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾಯಕ ಶರಣರ ಜಯಂತಿಯನ್ನು ಸರಳವಾಗಿ ಆಚರಿಸಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ಇಂದಿನಿಂದ 'ರಾಜಸ್ಥಾನ ಗ್ರಾಮೀಣ ಮೇಳ' ಆರಂಭ

ದಾವಣಗೆರೆ, ಮಾ.10- ರಾಜಸ್ಥಾನ್ ಆರ್ಟ್ಸ್ ಮತ್ತು ಕ್ರಾಫ್ಟ್ ಅವರ ಸಂಯೋಜನೆಯಲ್ಲಿ ರಾಜಸ್ಥಾನ್ ಆರ್ಟ್ಸ್ ಹಾಗೂ ಕ್ರಾಫ್ಟ್ ವಿವಿಧ ಕರಕುಶಲ ವಸ್ತುಗಳ ಮತ್ತು ಕೈಮಗ್ಗ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳ ನಾಳೆ ಶುಭಾರಂಭಗೊಳ್ಳಲಿದೆ ಎಂದು ಆಯೋಜಕರಾದ ಮಹಾವೀರ ಇಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಳಿಗ್ಗೆ 11 ಗಂಟೆಗೆ ಗುರುಭವನದಲ್ಲಿ ಮಹಾಪೌರ ಎಸ್.ಟಿ. ವೀರೇಶ್ ಅವರು ಮೇಳಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಈ ಮೇಳದಲ್ಲಿ 40 ಕ್ಕೂ ಹೆಚ್ಚು ಸ್ಟಾಲ್‌ಗಳನ್ನು ತೆರೆಯಲಾಗಿದ್ದು, ಸಾವಿರಾರು ಬಗೆಯ ಉಡುಪುಗಳು, ಸೀರೆಗಳು ಮತ್ತು ಕರಕುಶಲ ವಸ್ತುಗಳು ಮಾರಾಟಕ್ಕೆ ಲಭ್ಯವಿರುತ್ತವೆ.

ರಾಜಸ್ಥಾನದ ಹಾಗೂ ಕರ್ನಾಟಕದ ಚನ್ನಪಟ್ಟಣದ ಗೊಂಬೆಗಳು, ಲಖನೌದ ಬ್ಲೂ-ಪಾಟ್ರಿ, ಮಣಿಪುರದ ಬ್ಲಾಕ್ ಸ್ಟೋನ್ ಆರ್ಟಿಕಲ್ಸ್, ತಮಿಳುನಾಡಿನ ಹಿತ್ತಾಳೆ ಮೂರ್ತಿಗಳು, ಪಾಂಡಿಚೆರಿಯ ಪೇಪರ್‌ನಿಂದ ತಯಾರಿಸಲಾದ ವಸ್ತುಗಳು ಕೂಡ ಮಾರಾಟಕ್ಕಿವೆ. ಮೇಳ ಮಾ. 11 ರಿಂದ ಏಪ್ರಿಲ್ 4 ರವರೆಗೆ ಪ್ರದರ್ಶನ ಮತ್ತು ಮಾರಾಟ ಮೇಳ ಏರ್ಪಡಿ ಸಲಾಗಿದೆ. ಪ್ರತಿದಿನ ಬೆಳಿಗ್ಗೆ 10 ರಿಂದ ರಾತ್ರಿ 9.30 ರವರೆಗೆ ಮೇಳ ಇರುತ್ತದೆ. ಮಾಹಿತಿಗಾಗಿ 98412 78707ಗೆ ಸಂಪರ್ಕಿಸಬಹುದು.

ಪತ್ರಿಕಾಗೋಷ್ಠಿಯಲ್ಲಿ ಅನಿಲ್‌ಕುಮಾರ್, ಬದ್ರಿನಾಥ್ ಇದ್ದರು.

## ಉಚಿತ ಬಿಲ್ವಪತ್ರೆ ವಿತರಣೆ

**ಭಗತ್‌ಸಿಂಗ್ ನಗರ :** ಮಹಾಶಿವರಾತ್ರಿಯ ಪ್ರಯುಕ್ತ ರುದ್ರಾಭಿಷೇಕಕ್ಕೆ ಬೇಕಾಗುವ ಪಾದ್ಯ, ಅರ್ಘ್ಯ, ಆಚಮನ, ಬಿಲ್ವಪತ್ರೆಯನ್ನು ಉಚಿತವಾಗಿ ಕೊಡಲಾಗುವುದು. ಆಸಕ್ತರು ಕೆ.ಎಂ. ತಿಪ್ಪೇಸ್ವಾಮಿ, # 685/8, ಅಂಜುಮ್ ಶಾಲೆ ಎದುರು, 1ನೇ ಮೇನ್, ಭಗತ್‌ಸಿಂಗ್ ನಗರ, ದಾವಣಗೆರೆ (84533 08188, 92420 69616) ಇವರನ್ನು ಸಂಪರ್ಕಿಸಬಹುದು.

**ಕೆಟಿಜೆ ನಗರ :** ಶಿವರಾತ್ರಿ ಪ್ರಯುಕ್ತ ರುದ್ರಾಭಿಷೇಕಕ್ಕೆ ಬೇಕಾಗುವ ಪಾದ್ಯ, ಅರ್ಘ್ಯ, ಆಚಮನ ಹಾಗೂ ಬಿಲ್ವಪತ್ರೆಯನ್ನು ಉಚಿತವಾಗಿ ಕೊಡಲಾಗುವುದು. ಕೆಟಿಜೆ ನಗರ 2ನೇ ಮೇನ್, 16ನೇ ತಿರುವಿನ (#451/2) ಎಂ. ವೀರಣ್ಣ, ಶ್ರೀ ಗುರು ರೇವಣಸಿದ್ದೇಶ್ವರ ನಿವಾಸದಲ್ಲಿ ಪಡೆಯಬಹುದು. ವಿವರಕ್ಕೆ 97403 05683ಗೆ ಸಂಪರ್ಕಿಸುವುದು.

# ವಿವಿಧೆಡೆಯಲ್ಲಿ ಇಂದು ಶಿವರಾತ್ರಿ ಕಾರ್ಯಕ್ರಮಗಳು



**ಬಿ. ಕಲಪನಹಳ್ಳಿಯ ಸಪ್ತಾಹದಲ್ಲಿ :** ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಮಹಾಶಿ ವರಾತ್ರಿ ಸಪ್ತಾಹ ಹಾಗೂ ಶರಣ ಬಸವೇಶ್ವರ ರಥೋ ತ್ಸವವನ್ನು ಮಾರ್ಚ್ 12 ರವರೆಗೆ ಹಮ್ಮಿಕೊಳ್ಳಲಾಗಿದೆ. ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಇಂದು (ಮಾ.11) ಗುರುವಾರ ಬೆಳಿಗ್ಗೆ 8 ಗಂಟೆಗೆ ಮುದೇಗೌಡ್ರ ಗಿರೀಶ್ ಧ್ವಜಾರೋಹಣ ನೆರವೇರಿಸುವರು. ಯು.ಕೆ. ಚಂದ್ರಶೇಖರಪ್ಪ (ಬಿ.ಕಲಪನಹಳ್ಳಿ), ಲಿಂ. ಕೆ.ವಿ. ಜಯದೇವಪ್ಪನವರ ಧರ್ಮಪತ್ನಿ ಚಂದ್ರಮ್ಮ ಮತ್ತು ಮಕ್ಕಳು (ಬಿ.ಕಲಪನಹಳ್ಳಿ), ಕೆ.ಜಿ. ಉಜ್ಜಪ್ಪ ಮತ್ತು ಮಕ್ಕಳು (ಬಿ.ಕಲಪನಹಳ್ಳಿ), ವಿಜಯಲಕ್ಷ್ಮಿ ಸಿದ್ದೇಶ್ ಹೊಂಬರಡಿ (ಬೆಂಗಳೂರು), ಲಿಂ. ಮುದೇಗೌಡ್ರ ಪರಮೇಶ್ವರಪ್ಪನವರ ಮಕ್ಕಳು (ದಾವಣಗೆರೆ), ಬಸವನಾಳು ಶಂಕರಪ್ಪ ಮತ್ತು ಮಕ್ಕಳು (ಎಲೆಬೇತೂರು) ಇಂದಿನ ಪೂಜಾ ಸೇವಾರ್ಥಿಗಳಾಗಿದ್ದಾರೆ.

**ಮಾವಿನಹೊಳೆ :** ಚನ್ನಗಿರಿ ತಾಲ್ಲೂಕು ಮಾವಿನಹೊಳೆ ಶ್ರೀಗುರು ಮಹಾರುದ್ರ ಸ್ವಾಮಿ ಮಹಾಶಿವರಾತ್ರಿ ಮಹೋತ್ಸವವು ಇಂದಿನಿಂದ (ದಿ. 11) ದಿ. 13ರ ಶನಿವಾರದವರೆಗೆ ಯಡಿಯೂರು ಕ್ಷೇತ್ರ ಹಾಗೂ ಚನ್ನಗಿರಿ ತಾ. ತಾವರಗೆರೆ ಶಿಲಾ ಮಠಾಧ್ಯಕ್ಷರಾದ ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸುವರು.

ಇಂದು (ದಿ.11) ರಾತ್ರಿ 8 ಗಂಟೆಗೆ ಜಾಗರಣೆ ನಂತರ ಶ್ರೀ ಮಠದ ಮನೆಯಿಂದ ರಾತ್ರಿ10.30 ಕ್ಕೆ ಪುಷ್ಪಗಳಿಂದ ಅಲಂಕೃತವಾದ ಶ್ರೀ ಗುರು ಮಹಾರುದ್ರಸ್ವಾಮಿ ಅಡ್ಡಪಲ್ಲಕ್ಕಿ ಉತ್ಸವವು ಸಕಲ ವಾದ್ಯ, ವೀರಗಾಸೆ, ಭಜನೆ, ಡೊಳ್ಳು ಕುಣಿತಗಳಿಂದ ಬೆಳಿಗ್ಗೆ 4 ಗಂಟೆಗೆ ಮಠಕ್ಕೆ ಆಗಮಿಸುವುದು. ನಂತರ ಶ್ರೀ ಮಲ್ಲಿಕಾರ್ಜುನ ಸ್ವಾಮಿಗೆ ಮಹಾರುದ್ರಾಭಿಷೇಕ, ಅಷ್ಟೋತ್ತರ, ದೀಪೋತ್ಸವ, ಬಿಲ್ವಾರ್ಚನೆ, ಪಾದಪೂಜೆ. ನಂತರ ಪ್ರಸಾದ ವಿನಿಯೋಗ ನಡೆಯುವುದು.

**ಮಲೇಬೆನ್ನೂರು :** ಇಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ 85ನೇ ಮಹಾ ಶಿವರಾತ್ರಿ ಅಂಗವಾಗಿ ಇಂದು ಸಂಜೆ 4.30 ಕ್ಕೆ ಪಟ್ಟಣದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ಸದ್ಭಾವನಾ ಶಾಂತಿ ಯಾತ್ರೆ ಹಾಗೂ ಬೆಳ್ಳಿ ರಥದಲ್ಲಿ 8 ಅಡಿ ಎತ್ತರದ ಬೃಹತ್ ಶಿವಲಿಂಗದ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿ. ಕೆ. ಮಂಜುಳಾಜಿ ತಿಳಿಸಿದ್ದಾರೆ.

ರಾತ್ರಿ 8 ಗಂಟೆಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಜಾಗರಣೆ ಕಾರ್ಯಕ್ರಮ ಏರ್ಪಡಿಸಿದ್ದು, ಮುಂಡಗೋಡು ಕೇಂದ್ರದ ಬಿ.ಕೆ. ಗಂಗಾಂಬಿಕಾ, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ ಭಾಗವಹಿಸಲಿದ್ದಾರೆ. ನಂತರ ಬೆಂಗಳೂರಿನ ಅಮರ ಗೀತ ತಂಡದಿಂದ ಭಕ್ತಿಗೀತೆ ಹಾಗೂ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

**ರಾಣೇಬೆನ್ನೂರು :** ನಗರದ ಕುಂಬಾರ ಓಣಿ ಶ್ರೀ ರಾಮಲಿಂಗ ಗುಡಿಯಲ್ಲಿ ಶಿವರಾತ್ರಿ ಪ್ರಯುಕ್ತ ಇಂದು ಬೆಳಿಗ್ಗೆ ಶಿವನಿಗೆ ಅಭಿಷೇಕ ನೆರವೇರಲಿದೆ. ಸಂಜೆ 6 ರಿಂದ ನಾಳೆ ಮಾ.12ರ ಶುಕ್ರವಾರ ಬೆಳಿಗ್ಗೆ 6 ವರೆಗೆ ಅಖಂಡ ಶಿವನಾಮ ಸ್ಮರಣೆ ನಡೆಯಲಿದೆ.

**ಬಾಳೇಹೊನ್ನೂರು ರಂಭಾಪುರಿ ಪೀಠ :** ಮಹಾಶಿವರಾತ್ರಿ ಹಿಂದೂಗಳಿಗೆ ಬಹು ದೊಡ್ಡ ಹಬ್ಬ. ಮಹಾಶಿವರಾತ್ರಿಯಂದು ಶಿವನಿಗೆ ವಿಶೇಷ ಪೂಜೆ ಎಲ್ಲೆಡೆ ಸಲ್ಲುತ್ತದೆ. ಮಹಾಶಿವರಾತ್ರಿ ಪರ್ವ ಕಾಲದಲ್ಲಿ ಬಾಳೇಹೊನ್ನೂರು ಶ್ರೀ ಪೀಠದಲ್ಲಿರುವ ಸೋಮೇಶ್ವರ ಮಹಾಲಿಂಗಕ್ಕೆ ವಿಶೇಷ ಪೂಜೆ ಜರುಗುವುದೆಂದು ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಮಾಹಿತಿ ನೀಡಿದರು.

**ಕನ್ಯಕಾಪರಮೇಶ್ವರಿ ದೇವಸ್ಥಾನ :** ನಗರದ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 6.30 ರಿಂದ ಶ್ರೀ ನಗರೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ ಎಂದು ಆರ್.ಎಲ್. ಪ್ರಭಾಕರ್, ಜೆ. ರವೀಂದ್ರ ಗುಪ್ತ ಅವರುಗಳು ತಿಳಿಸಿದ್ದಾರೆ. ಸಂಜೆ 6 ಗಂಟೆಯಿಂದ ಶ್ರೀ ಈಶ್ವರ ಲಿಂಗುವಿಗೆ ಆರ್ಯವೈಶ್ಯ ಕುಲಬಾಂಧವರಿಂದ ಜಲಾಭಿಷೇಕ ಹಾಗೂ 4 ಯಾಮಗಳ ಅಖಂಡ ಪೂಜೆ ನೆರವೇರಲಿದೆ. ಸಂಜೆ 6 ರಿಂದ ರಾತ್ರಿ 9ರವರೆಗೆ 1ನೇ ಯಾಮದ ಪೂಜೆ, ರಾತ್ರಿ 9 ರಿಂದ 12ರವರೆಗೆ 2ನೇ ಯಾಮದ ಪೂಜೆ, ರಾತ್ರಿ 12 ರಿಂದ 3ರವರೆಗೆ 3ನೇ ಯಾಮದ ಪೂಜೆ, ರಾತ್ರಿ 3 ರಿಂದ ಬೆಳಿಗ್ಗೆ 6ರವರೆಗೆ 4ನೇ ಯಾಮದ ಪೂಜೆಗಳು ಪುದುವಟ್ಟುದಾರರು ಮತ್ತು ಸೇವಾಕರ್ತರುಗಳಿಂದ ಜರುಗಲಿವೆ.

**ಲಿಂಗೇಶ್ವರ ಸ್ವಾಮಿ ದೇವಸ್ಥಾನ :** ದಾವಣಗೆರೆಯ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಹಾಶಿವರಾತ್ರಿಯ ಪ್ರಯುಕ್ತ ವಿಶೇಷ ಹೂವಿನ ಅಲಂಕಾರ, (ಇಂದು ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.30 ರವರೆಗೆ ಅಭಿಷೇಕ) ಪೂಜಾ ಕಾರ್ಯಕ್ರಮಗಳು.

**ಡಿಸಿಎಂ ಟೌನ್‌ಶಿಪ್ ನಾಗರಿಕರ ಸಂಘ :** ಮಹಾಶಿವರಾತ್ರಿ ಜಾಗರಣೆ ಹಾಗೂ ಭಕ್ತಿ ಸಿಂಚನ ಕಾರ್ಯಕ್ರಮ. ಉದ್ಘಾಟನೆ : ಎಸ್.ಟಿ.ವೀರೇಶ್, ಅಧ್ಯಕ್ಷತೆ : ವಿಜಯಕುಮಾರ್, ಅತಿಥಿಗಳು : ಪ್ರಕಾಶ್ ಪಿ.ಬಿ., ಮೂಡಲಗಿರಿಯಪ್ಪ, ಸುಮಾ ಮಲ್ಲಿಕಾರ್ಜುನಯ್ಯ, ಶಾಂಬೋಜಿರಾವ್ ಡಿ.

**ನೀಲಕಂಠೇಶ್ವರ ದೇವಸ್ಥಾನ :** ಕೆಟಿಜಿ ನಗರ 2ನೇ ಮೇನ್, 14 ನೇ ಕ್ರಾಸ್‌ನ ಶ್ರೀ ನೀಲಕಂಠೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಮಹೋತ್ಸವ ಹಾಗೂ ಸಂಜೆ 6.30 ಕ್ಕೆ ಮಹಾಮಂಗಳಾರತಿ ಪ್ರಸಾದ.

**ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ :** ಹಳೇ ಬೇತೂರು ರಸ್ತೆಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಬೆಳಿಗ್ಗೆ 5.30 ರಿಂದ ರುದ್ರಾಭಿಷೇಕ.

**ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘ :** ಎಸ್‌ಕೆಪಿ ರಸ್ತೆಯ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ವತಿಯಿಂದ ಮಹಾಶಿವರಾತ್ರಿ ಪ್ರಯುಕ್ತ ಬೆಳಿಗ್ಗೆ 7.30 ರಿಂದ ಕ್ಷೀರಾಭಿಷೇಕ, ರುದ್ರಾಭಿಷೇಕ, ಬಿಲ್ವಾರ್ಚನೆ, ತೀರ್ಥ ಪ್ರಸಾದ. ಸಂಜೆ 7.30ಕ್ಕೆ ಅಭಿಷೇಕ.

**ಶಂಭುಲಿಂಗೇಶ್ವರ ದೇವಸ್ಥಾನ :** ವಿನೋಬನಗರ 1ನೇ ಮೇನ್, 2ನೇ ಅಡ್ಡರಸ್ತೆಯಲ್ಲಿರುವ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ರವರೆಗೆ ವಿಶೇಷ ಮಹಾರುದ್ರಾಭಿಷೇಕ, ಮಧ್ಯಾಹ್ನ 1ಕ್ಕೆ ವಿಶೇಷ ಅಲಂಕಾರ, ಮಹಾಮಂಗಳಾರತಿ.

**ಬನ್ನಿ ಮಹಾಂಕಾಳಿ ದೇವಸ್ಥಾನ:** ನಗರದ ಜಯನಗರ ಬೀರೇಶ್ವರ ಬಡಾವಣೆ, ಸರಸ್ವತಿ ನಗರದ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಮಹಾಶಿವರಾತ್ರಿ ಪ್ರಯುಕ್ತ ಸಂಜೆ 7.30ಕ್ಕೆ ಜಾಗರಣೆ ಮಹೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಕಾರ್ಯಕ್ರಮದ ಉದ್ಘಾಟನೆಯನ್ನು ಪಾಲಿಕೆ ಮೇಯರ್ ಎಸ್.ಟಿ.ವೀರೇಶ್ ನೆರವೇರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಮಿತಿ ಅಧ್ಯಕ್ಷ ಹಾಗೂ ವಿಶ್ರಾಂತ ಪ್ರಾಂಶುಪಾಲ ಪ್ರೊ. ಬಾಗೂರು ಆನಂದಪ್ಪ, ಡಾ. ರಂಗನಾಥ ತಾವರ್‍ಯಾನಾಯ್ಕ, ರಾಜಶೇಖರ್ ಮತ್ತಿತರರು ಉಪಸ್ಥಿತರಿರುವರು.

ದಿ. 12ರ ಶನಿವಾರ ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಲಿದೆ ಎಂದು ಸಮಿತಿ ಕಾರ್ಯದರ್ಶಿ ಬೀರಲಿಂಗಪ್ಪ ತಿಳಿಸಿದ್ದಾರೆ.

**ಈಶ್ವರ ಪಾರ್ವತಿ ಗಣಪತಿ ದೇವಸ್ಥಾನ :** ದಾವಣಗೆರೆ ವಿದ್ಯಾನಗರದ ಶ್ರೀ ಈಶ್ವರ ಪಾರ್ವತಿ ಗಣಪತಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 5 ಗಂಟೆಗೆ ವಿಶೇಷ ರುದ್ರಾಭಿಷೇಕ, ಲಕ್ಷ ಬಿಲ್ವಾರ್ಚನೆ, ಮಹಾಮಂಗಳಾರತಿ ಜರುಗಲಿದೆ. ಸಂಜೆ 7 ಗಂಟೆಗೆ ದೇವಸ್ಥಾನ ಆವರಣದಲ್ಲಿ ವಿವಿಧ ಸಂಘ-ಸಂಸ್ಥೆಗಳಿಂದ ಸುಗಮ ಸಂಗೀತ ಕಾರ್ಯಕ್ರಮ, ಭರತನಾಟ್ಯ ಹಾಗೂ ಭಜನಾ ಕಾರ್ಯಕ್ರಮಗಳು ಇಡೀ ರಾತ್ರಿ ಜರುಗಲಿವೆ ಎಂದು ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಬೆಳವನೂರು ನಾಗರಾಜಪ್ಪ ತಿಳಿಸಿದ್ದಾರೆ.

**ವಿಶ್ವೇಶ್ವರಯ್ಯ ಪಾರ್ಕ್ ಬನ್ನಿ ಮಹಾಂಕಾಳಿ ದೇವಸ್ಥಾನ :** ಪಿಜೆ. ಬಡಾವಣೆ ವಿಶ್ವೇಶ್ವರಯ್ಯ ಪಾರ್ಕ್ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ಇಂದು ಶಿವರಾತ್ರಿ ಪ್ರಯುಕ್ತ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 12ರವರೆಗೆ ಅಮ್ಮನವರ ಬೆಳ್ಳಿ ಪಾದುಕೆ ಅಭಿಷೇಕ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಪ್ರಧಾನ ಅರ್ಚಕರು ತಿಳಿಸಿದ್ದಾರೆ.

**ಬೀರಲಿಂಗೇಶ್ವರ ದೇವಸ್ಥಾನ :** ನಗರದ ಪಿ.ಬಿ. ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ಇಂದು ವಿಶೇಷ ಪೂಜೆಗಳು ನಡೆಯಲಿವೆ. ಬೆಳಿಗ್ಗೆ 6.30ಕ್ಕೆ ಸ್ವಾಮಿಗೆ ವಿಶೇಷ ಪುಷ್ಪಾಲಂಕಾರ, ಅಭಿಷೇಕ ನಡೆಯಲಿದೆ. ರಾತ್ರಿ 7.30 ರಿಂದ ಜಾಗರಣೆ ನಂತರ ಫಲಾಹಾರ ನಡೆಯುವುದು. ದಿನಾಂಕ 12ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಕೆಂಗೋ ಹನುಮಂತಪ್ಪ, ಬಿ.ಹೆಚ್. ಪರಶುರಾಮಪ್ಪ, ಬಿ. ಷಣ್ಮುಖಪ್ಪ ತಿಳಿಸಿದ್ದಾರೆ.

## ದೃಶ್ಯಕಲಾ ಕಾಲೇಜಿನ ಜಾಗಕ್ಕೆ ಶಾಶ್ವತ ಪರಿಹಾರ ಕಲ್ಪಿಸಲಿ



ದಾವಣಗೆರೆ, ಮಾ. 10 – ಇಲ್ಲಿನ ದೃಶ್ಯಕಲಾ ಮಹಾವಿದ್ಯಾಲಯದ ಜಾಗಕ್ಕೆ ಸಂಬಂಧಿಸಿದಂತೆ ಶಾಶ್ವತ ಪರಿಹಾರ ಕಲ್ಪಿಸುವ ಅಗತ್ಯವಿದೆ ಎಂದು ಹಿರಿಯ ವಿದ್ಯಾರ್ಥಿ, ಕಲಾವಿದರೂ ಆದ ಎ. ಮಹಾಲಿಂಗಪ್ಪ ಅಭಿಪ್ರಾಯ ಪಟ್ಟಿದ್ದಾರೆ. ಅಧಿಕಾರಿಗಳು ಹಸ್ತಕ್ಷೇಪ ಮಾಡದೆ ಕಾಲೇಜಿಗೆ ಸಂಬಂಧಿಸಿದ ಕಟ್ಟಡ ನಿರ್ಮಿಸಬೇಕು ಜಿಲ್ಲೆ ಆರಂಭವಾದಗಿನಿಂದಲೂ ಜಾಗ ಉಳಿಸಿಕೊಳ್ಳಲು ಹೋರಾಟ ಮಾಡುತ್ತಲೇ ಬಂದಿದ್ದೇವೆ ಕಾಲೇಜಿನ ಆಸ್ತಿ ಕಾಲೇಜಿಗೆ ಉಪಯೋಗವಾಗಲಿ ಎಂದು ಹೇಳಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ವಾಜಪೇಯಿ ಲೇಔಟ್‌ನಲ್ಲಿ**
40x60 East, 30x57 West, 30x40 west, 30x50 East, 20x30 East, 20x30 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಸೈಟ್‌ಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ, ವಿವೇಕಾನಂದ ಬಡಾವಣೆಯಲ್ಲಿ 50x50 west, 40x60 North, 30x38, 30x38 East ಅಕ್ಕ-ಪಕ್ಕ 40x56 South, 30x50 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಬೇಕಾಗಿದ್ದಾರೆ**
ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್, ಕಂಪ್ಯೂಟರ್ ಆಪರೇಟರ್
ಆಮಂತ್ರಣ
ಬಟ್ಟೆ ಅಂಗಡಿ,
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.

**ಸೈಟ್‌ಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ**
ವಿನಾಯಕ ಬಡಾವಣೆಯಲ್ಲಿ 40x60 ಅಕ್ಕ-ಪಕ್ಕ, ಸಪ್ತಗಿರಿ ಹಾಸ್ಟೆಲ್, ಬಸವೇಶ್ವರ ಬಡಾವಣೆಯಲ್ಲಿ ಸಿಂಗಲ್ ಬೆಡ್ ರೂಂ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕೆಲಸಕ್ಕೆ ಬೇಕಾಗಿದ್ದಾರೆ**
ಬೇಕರಿಯಲ್ಲಿ ಕೆಲಸಕ್ಕೆ ನುರಿತ ಯುವಕ ಅಥವಾ ಯುವತಿಯರು ಹಾಗೂ ನುರಿತ (ಅನುಭವಿ) ಮಾಸ್ಟರಗಳು ಬೇಕಾಗಿದ್ದಾರೆ.
ಮೊ. : 8431730550
98451 54400

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x60 South 40 ಅಡಿ ರೋಡಿಗಿದೆ, 30x50 West, 60 ಅಡಿ ರೋಡಿಗಿದೆ, 30x40 East, 30x40 North, 30x40 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಮನೆ ಮಾರಾಟಕ್ಕೆ ಇದೆ**
30×50 ಸೈಟ್‌ನಲ್ಲಿ 2 ಬೆಡ್‌ರೂಂನ ಆಧುನಿಕ ವ್ಯವಸ್ಥೆಯುಳ್ಳ, ವಾಸ್ತು ಪ್ರಕಾರ ಕಟ್ಟಿರುವ, ಪಶ್ಚಿಮ ದಿಕ್ಕಿನ ಮನೆ, ಬಾಲಾಜಿ ಬಡಾವಣೆಯಲ್ಲಿ ಮಾರಾಟಕ್ಕೆ ಇದೆ. ವಿಚಾರಿಸಿ :
98448 82366

**ಡ್ರೈವರ್ ಬೇಕಾಗಿದ್ದಾರೆ**
ಅಶೋಕ ಲೈಲ್ಯಾಂಡ್ ದೋಸ್ತ್ ಗೆ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ
63627 43320

**ಬೇಕಾಗಿದ್ದಾರೆ**
ಸೇಲ್ಸ್ ಮನ್ ಮತ್ತು ಡೆಲಿವರಿ ಬಾಯ್ಸ್
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ
94823 73289

**ಪಾರ್ಟ್ ಟೈಂ**
ಬೆಳಿಗ್ಗೆ ಮತ್ತು ಸಂಜೆ ಆಫೀಸ್‌ನಲ್ಲಿ ಪಾರ್ಟ್ ಟೈಂ ಕೆಲಸ ಮಾಡಲು Tele Caller ಬೇಕಾಗಿದ್ದಾರೆ.
Call : 90089 85112

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed.-02, BA, B.Ed. (Eng) -02, B.Sc. B.Ed.-3 M.Sc./M.Com/MBA-02
LITTLE CHAMPS GURUKULAM
Near HKR Circle, College Road, Nittuvalli, Davangere.
9060906039, 9844332559

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
2 ಬೆಡ್‌ರೂಮ್ ಮನೆ ಮೊದಲನೆಯ ಮಹಡಿಯಲ್ಲಿ ಬಾಡಿಗೆಗೆ/ಲೀಸ್‌ಗೆ ಇದೆ. ಕೆ.ಬಿ. ಬಡಾವಣೆ, ಜೈನ್ ಮಂದಿರ ಹತ್ತಿರ, ತ್ರಿಶೂಲ್ ಟಾಕೀಸ್ ಹಿಂಭಾಗ, ದಾವಣಗೆರೆ.
70198 96845

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆಗೆ ಇದೆ**
ಸಕಲ ಸೌಕರ್ಯವುಳ್ಳ ಉತ್ತರಕ್ಕೆ ಬಾಗಿಲಿರುವ ಮೊದಲನೇ ಮಹಡಿಯಲ್ಲಿ ಎರಡು ಬೆಡ್ ರೂಮ್ ಮನೆ ಬಾಡಿಗೆಗೆ ಇದೆ. #1859/34, "ಭಾವ ಸಂಗಮ" LIC ಕಾಲೋನಿ, 4ನೇ ಮುಖ್ಯರಸ್ತೆ (ನೂತನ ಕಾಲೇಜ್ ಹಿಂಭಾಗ) ದಾವಣಗೆರೆ-4
94487 46875

**ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು SSLC/PUC ಫೇಲಾದ ಯುವಕರು, ಬ್ಯಾಡ್ಜ್ ಹಾಗೂ ಲೈಸೆನ್ಸ್ ಹೊಂದಿರುವವರು ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ.
ಪ್ರತೀಕ್ ಎಂಟರ್ ಪ್ರೈಸಸ್
ನಾಗನೂರು- ಶಾಮನೂರು ರಸ್ತೆ, ಶಾಮನೂರು, ದಾವಣಗೆರೆ.

**ಮನೆ ಮಾರಾಟಕ್ಕಿದೆ**
20x30 ಅಳತೆಯ, ದಕ್ಷಿಣ ದಿಕ್ಕಿಗಿರುವ ಡೋ.ನಂ. 3371/17/b4, 13ನೇ ಮೇನ್, 3ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, ಶಂಕರಲೀಲಾ ಗ್ಯಾಸ್ ಏಜೆನ್ಸೀಸ್ ಹತ್ತಿರ 13 ವರ್ಷದ ಮನೆ ಮಾರಾಟಕ್ಕಿದೆ.
80734 38728

**Raksha Charitable and Educational Trust (R.)**
REQUIRED
Pro's Staff for PU College Admission (Gents and ladies) Telecalling, Contact :
8296376716, 9916818369
Location: Davangere, Harihara, Chitradurga, Harapanalli, Channagiri

**ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪಾರ್ಟ್ ಟೈಂ or ಫುಲ್ ಟೈಂ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಮಾತ್ರ.
ವೆಂಕಟೇಶ್ವರ ಫಾರ್ಮಾಸ್ಯೂಟಿಕಲ್ಸ್
ಕೆ.ಟಿ.ಜೆ. ನಗರ, ದಾವಣಗೆರೆ.
86607 75329

**ಶಿಕ್ಷಕರು ಬೇಕಾಗಿದ್ದಾರೆ**
B.Ed, D.Ed, B.Com, M.Com ಆಗಿರುವ ಇಂಗ್ಲಿಷ್ ಅನುಭವವುಳ್ಳ ಶಿಕ್ಷಕಿಯರು ಬೇಕಾಗಿದ್ದಾರೆ.
ಸ್ಮಾರ್ಟ್ ಕಿಡ್ಸ್ ಪಬ್ಲಿಕ್ ಸ್ಕೂಲ್
RTO ಆಫೀಸ್, ಕೊಂಡಜ್ಜಿ ರಸ್ತೆ, ದಾವಣಗೆರೆ.
95358 06493, 89703 66639

**ಬೇಕಾಗಿದ್ದಾರೆ**
ಫಾರ್ಮಾದಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
SSLC Or PUC
ವಿಳಾಸ :
ಫಾರ್ಮಾ
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ.

**ಉಚಿತ 30 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ (Return Gift) 30 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
94805 64551, 91418 74551

**FREE WORKSHOP FOR UPCOMING EXAM**
10th CBSE & STATE STUDENTS
Date : 14-03-2021 Venue : Rotary Club Hall, Vidyanagar,
Timings : 10 am to 5 pm
Enrol today :
89517 17444, 97402 15992
STUDY IQ ACADEMY DAVANGERE

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಪಿಯುಸಿ Or Any Degree.
ವಿಳಾಸ :
ಕಾವೇರಿ ಮೆಡಿ ಹೌಸ್ ಪ್ರೈ. ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ.

**DHUDA APPROVED SITES FOR SALE AT HARIHARA IN INSTALMENTS**
93804 37609

**ಕೆಲಸಗಾರರು ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಮಹಿಳೆ-01, ಮೆಕ್ಯಾನಿಕ್ (ದ್ವಿ ಚಕ್ರ ವಾಹನಗಳ ಅನುಭವ) -01, ಹೆಲ್ಪರ್ -01, ಸೇಲ್ಸ್ ರೆಪ್ರೆಸೆಂಟೇಟಿವ್ -02
ಶ್ರೀ ಸುಬ್ರಮಣ್ಯ ಮೋಟಾರ್ಸ್
ಮಲೇಬೆನ್ನೂರು
90085 40552

**ಸೈಟ್ ಮಾರಾಟಕ್ಕಿದೆ**
ಎಸ್.ಎಸ್.ಲೇಔಟ್ 40x60 ಎರಡು ಸೈಟ್‌ಗಳು ಅಕ್ಕ-ಪಕ್ಕ ದಕ್ಷಿಣ, ವಿವೇಕಾನಂದ ಬಡಾವಣೆ 70x50 ಪೂರ್ವ ಉತ್ತರ ಕಾರ್ನರ್, ಭಗೀರಥ ಸರ್ಕಲ್ 25x50 ಉತ್ತರ.
8618182332

**ಗುಮಾಸ್ತರು ಬೇಕಾಗಿದ್ದಾರೆ**
ದಾವಣಗೆರೆಯ ಅಂಗಡಿ ಕೆಲಸಕ್ಕೆ ಗುಮಾಸ್ತರು ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ :
ಬೆಳಿಗ್ಗೆ 11 ರಿಂದ ಸಂಜೆ 5ರ ಒಳಗೆ
99864 67206

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಗ್ಲಾಸ್ ಹೌಸ್ ಹತ್ತಿರ ಸೈಟ್ ಮಾರಾಟಕ್ಕಿದೆ**
ಉತ್ತರ ; 30x50
ದಕ್ಷಿಣ 30x40
98444 06587

**BASIC, DTP TALLY PHOTOSHOP**
Rs. 500/- Per month
74062 78270

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318
95352 69849

**WANTED**
Candidates PUC/ Degree to work in Harihar. Salary + Incentive
93804 37609

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ ಚಿತ್ರದುರ್ಗಕ್ಕೆ ಹೋಗುವ ಮಾರ್ಗ ಮಧ್ಯೆ ಟಾರ್ ರಸ್ತೆ ಸಂಪರ್ಕವಿರುವ ಬೋರ್‌ವೆಲ್ ಹೊಂದಿರುವ 2 ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
95385 58466

**ಬೇಕಾಗಿದ್ದಾರೆ**
ಡ್ರೈವರ್ ಬೇಕಾಗಿದ್ದಾರೆ. ವಯಸ್ಸು 40 ವರ್ಷ. ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
ಶ್ರೀ ಆಪ್ಟಿಕಲ್ಸ್
# 312, ವಿನಾಯಕ ಕಾಂಪ್ಲೆಕ್ಸ್, ಪೆವಿಲಿಯನ್ ರೋಡ್, ಶಿವಪ್ರಕಾಶ್ ಮೆಮೋರಿಯಲ್ ಆಸ್ಪತ್ರೆ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.
98864 04287

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
7406740635
74063 96332

**Computer Faculty WANTED**
Part/Full Time
MS Office, DTP, Tally is a Must.
97424 05888


**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಅನುಭವವುಳ್ಳ ಯುವಕರು ಬೇಕಾಗಿದ್ದಾರೆ, ಅನುಭವದ ಮೇಲೆ 8 ರಿಂದ 10 ಸಾವಿರ ರೂ. ವೇತನ ನೀಡಲಾಗುವುದು.
ಶ್ರೀ ವಾಸವಿ ಮೆಡಿಕಲ್
ಎಂಪೋರಿಯಮ್, ಪಿಜೆ ಬಡಾವಣೆ, ದಾವಣಗೆರೆ.
94493 96461

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
8ನೇ ಡ್ರಾ ನಂಬರ್
ನಂಬರ್ 508
H.M. MALLIKARJUN
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ನ್ಯೂ M.G.S. ಜ್ಯುಯಲರ್ಸ್**
ಆನಂದ್ ಬುಕ್ ಡಿಪೋ ಎದುರು ಮಂಡಿಪೇಟೆ, ದಾವಣಗೆರೆ. ಫೋ: 231951
E Group 4th Draw
1) ವಿಶೇಷ ಬಹುಮಾನ
21000/- 1, ಡ್ರಾ ವಿಜೇತರು -ನಂ. 310
2) ಸಮಾಧಾನಕರ ಬಹುಮಾನ - 4 ಡ್ರಾ ವಿಜೇತರು - ನಂ. 105, 035, 116, 285




ದಾವಣಗೆರೆ, ಮಾ. 10- ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದೊಂದಿಗೆ ರಂಗ ತರಬೇತಿ ಶಿಬಿರದ ಸಮಾರೋಪದ ಅಂಗವಾಗಿ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಮಂಗಳವಾರ ಸಂಜೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಜೀವನಾಧಾರಿತ ಆಯ್ಕೆ ಘಟನೆಗಳ 'ಹಾಡು ಹಕ್ಕಿ' ನಾಟಕ ಪ್ರದರ್ಶನ ನಡೆಯಿತು.

# ಸಾಮೂಹಿಕ ವಿವಾಹ ಸಾಲ ತಪ್ಪಿಸುತ್ತದೆ



ಹರಪನಹಳ್ಳಿ,ಮಾ.10- ಸಾಮೂಹಿಕ ವಿವಾಹಗಳು ಆರ್ಥಿಕ ಹೊರೆ ಇಳಿಸುವುದಲ್ಲದೆ, ಸಾಲಕ್ಕೆ ಮೂಲವಾಗುವುದನ್ನು ತಪ್ಪಿಸುತ್ತವೆ ಎಂದು ಬಾಲೆಹೊಸೂರಿನ ಶ್ರೀ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ನೀಲಗುಂದ ಗ್ರಾಮದ ಶ್ರೀಮಠದ ಮುಖ್ಯ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಮಹಾದ್ವಾರದ ಉದ್ಘಾಟನೆ ಹಾಗೂ ಸಾಮೂಹಿಕ ವಿವಾಹದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಹಿಂದೆಲ್ಲಾ ಸಾಲಾವಳಿ ನೋಡಿ ಮದುವೆ ಮಾಡುತ್ತಿದ್ದರು. ಇಂದು ಹುಡುಗ-ಹುಡುಗಿಯ ರಕ್ತ ಪರೀಕ್ಷೆ ಮಾಡಿ ಮದುವೆ ಮಾಡಬೇಕಿದೆ. ಸಾಮೂಹಿಕ ವಿವಾಹಗಳಿಂದ ಜಾತ್ಯತೀತ ಮನೋಭಾವನೆಯನ್ನು ಹುಟ್ಟು ಹಾಕಿದ ಶರಣ ಬಸವಣ್ಣ, ಅಂದೇ ಐಷಾರಾಮಿ ವಿವಾಹಗಳು ಆರ್ಥಿಕ ಹೊರೆ ಎಂಬುದನ್ನು ಅರಿವಿಗೆ ತಂದಿದ್ದರು ಎಂದರು.

ನೀಲಗುಂದ ಗುಡ್ಡದ ವಿರಕ್ತ ಮಠದ ಪೀಠಾಧಿಪತಿಗಳಾದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ಮಾತನಾಡಿ ಸಾಮೂಹಿಕ ವಿವಾಹಗಳು ಕೋಟ್ಯಾಂತರ ಹಣ ಉಳಿಕೆಗೆ ಕಾರಣವಾಗುತ್ತವೆ. ಮಿತ ಸಂತಾನಕ್ಕೆ ಆದ್ಯತೆ ಇರಲಿ. ಪ್ರೀತಿಯ ಜೊತೆಯಲ್ಲಿ ಆರ್ಥಿಕ ಮುಗ್ಗಟ್ಟು ಕಡಿಮೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ನಿಮ್ಮ ತಂದೆ-ತಾಯಿಗಳಿಗೆ ಗೌರವ, ಪ್ರೀತಿ ನೀಡಿದರೆ

## ದಿಂಗಾಲೇಶ್ವರ ಶ್ರೀಗಳು

ಶ್ರೇಯಸ್ಸು ಲಭ್ಯವಾಗುವುದು. ವೃದ್ಧ ತಂದೆ-ತಾಯಿಗಳನ್ನು ವೃದ್ಧಾಶ್ರಮಕ್ಕೆ ಬಿಡುವ ಮನಸ್ಸಿನಿಂದ ಹೊರಬನ್ನಿ. ಆಗ ಮಾತ್ರ ನಿಮ್ಮ ಭವಿಷ್ಯ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್ 'ನೀಲಗುಂದದ ನೀಲಾಂಜಲಿ' ಗ್ರಂಥ ಬಿಡುಗಡೆ ಮಾಡಿ ಮಾತನಾಡಿ ಮಠದಲ್ಲಿ 60 ಜೋಡಿ ವಿವಾಹಗಳು ಜರುಗಿದ್ದು, ಅವಿಭಕ್ತ ಕುಟುಂಬದ ಜೊತೆಗೆ ಜೀವನ ನಡೆಸಿರಿ ಎಂದು ಕರೆ ನೀಡಿದರು. ಗ್ರಂಥದಲ್ಲಿ ಇಡೀ ಮಠದ ಹಾಗೂ ಶ್ರೀಗಳ ಜೀವನ ಚರಿತ್ರೆ ಚೆನ್ನಾಗಿ ಮೂಡಿ ಬಂದಿದೆ ಎಂದರು.

ಲಿಂಗನಾಯಕನಹಳ್ಳಿ ಜಂಗಮ ಕ್ಷೇತ್ರದ ಶ್ರೀ ಚೆನ್ನವೀರ ಶಿವಯೋಗಿ ಶ್ರೀಮಠದ ಮುಖ್ಯ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಮಹಾದ್ವಾರದ ಉದ್ಘಾಟನೆ ನೇರವೇರಿಸಿ ಆಶೀರ್ವಚನ ನೀಡಿದರು. ಅಗಡಿ- ಗುತ್ತಲದ ಶ್ರೀ ಗುರುಸಿದ್ಧ ಸ್ವಾಮೀಜಿ, ಗುಡ್ಡದ ಅನ್ವೇರಿ ಮಠದ ಶ್ರೀ ಶಿವಯೋಗೇಶ್ವರ ಸ್ವಾಮೀಜಿ, ಶ್ರೀ ಸಿದ್ದೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪುರಸಭೆ ಮಾಜಿ ಅಧ್ಯಕ್ಷೆ ಕವಿತಾ ವಾಗೀಶ್, ವಕೀಲರುಗಳಾದ ಬಿ. ವಾಗೀಶ್, ಸಿದ್ದಲಿಂಗನಗೌಡ, ಮುಖಂಡರುಗಳಾದ ಗುಂಡಗತ್ತಿ ಕೊಟ್ರಪ್ಪ, ಬೇಲೂರು ಸಿದ್ದೇಶ್, ಮಾಳ್ಗಿ ತಿಮ್ಮೇಶ್, ತಿರುಪತಿ, ಶಿಕ್ಷಕ ಹನುಮಂತಪ್ಪ ಇನ್ನಿತರರು ಉಪಸ್ಥಿತರಿದ್ದರು.

## ರೈತರ ಮಕ್ಕಳಿಗೆ ಶೇ. 50 ಮೀಸಲಾತಿ ಹೆಚ್ಚಿಸಿರುವುದು ಸ್ವಾಗತಾರ್ಹ

ಕೃಷಿ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆಯಲು ರೈತರ ಮಕ್ಕಳಿಗೆ ಶೇ. 50 ರಷ್ಟು ಮೀಸಲಾತಿ ಹೆಚ್ಚಿಸಿರುವುದು ಸ್ವಾಗತಾರ್ಹ. ಸಾವಯವ ಇಂಗಾಲ ಮತ್ತು ಸಾವಯವ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿರುವುದು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಕಿರು ಆಹಾರ ಸಂಸ್ಕರಣೆ ಉದ್ದಿಮೆ, ತೋಟಗಾರಿಕೆ ತಂತ್ರಜ್ಞಾನ ಪಾರ್ಕ್, ನವೋದ್ಯಮಗಳ ಆಹಾರ ಪಾರ್ಕ್,ರೇಷ್ಮೆ ಭವನ ನಿರ್ಮಾಣ, ಕೃಷಿ ಯಾಂತ್ರೀಕರಣಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು ಒಳ್ಳೆಯ ಬೆಳವಣಿಗೆ. ಹಾಗೆಯೇ ದಾವಣಗೆರೆಗೆ ಕೃಷಿ ಮತ್ತು ತೋಟಗಾರಿಕೆ ಕಾಲೇಜು ನೀಡದಿರುವುದು ಬೇಸರದ ಸಂಗತಿ.



- ಬಸವನಗೌಡ ಎಂ.ಜಿ.,
ತೋಟಗಾರಿಕೆ ವಿಜ್ಞಾನಿಗಳು, ಐಸಿಎಆರ್,
ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

## ಮೀಸಲಾತಿ ನೀಡಲು ಸಮಿತಿ ರಚನೆ ಬೇಡ: ಅಂಜುಕುಮಾರ್

ದಾವಣಗೆರೆ, ಮಾ.10- ವಿವಿಧ ಜಾತಿಗಳಿಂದ ಮೀಸಲಾತಿ ಬೇಡಿಕೆ ಬಂದಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ತ್ರಿಸದಸ್ಯ ಉನ್ನತ ಮಟ್ಟದ ಸಮಿತಿ ರಚಿಸಿ ಕಾಲಮಿತಿಯಿಲ್ಲದೆ ವರದಿ ಸಲ್ಲಿಕೆ ನಂತರ ಮೀಸಲಾತಿ ಬೇಡಿಕೆಯನ್ನು ಈಡೇರಿಸಲು ತೀರ್ಮಾನಿಸಿದೆ. ವಾಲ್ಮೀಕಿ ನಾಯಕ ಸಮುದಾಯದ ಪರವಾಗಿ ಒತ್ತಾಯಿಸುವುದೇನೆಂದರೆ, ಅನ್ಯ ಸಮುದಾಯಗಳು ಒತ್ತಾಯಿಸುತ್ತಿರುವುದು ವರ್ಗ ಬದಲಾವಣೆಗಾಗಿ. ವಾಲ್ಮೀಕಿ ಸಮುದಾಯ ಒತ್ತಾಯಿಸುತ್ತಿರುವುದು ಮೀಸಲು ಪ್ರಮಾಣ ಹೆಚ್ಚಿಸಲು. ವರ್ಗಗಳ ಬದಲಾವಣೆ ಬಯಸುವ ಸಮುದಾಯಗಳಿಗೆ ಸಮಿತಿ ರಚಿಸಿ ಕ್ರಮ ಕೈಗೊಳ್ಳಲಿ. ಆದರೆ ವಾಲ್ಮೀಕಿ ಸಮಾಜಕ್ಕೆ ಮುಖ್ಯಮಂತ್ರಿಗಳು ನೀಡಿದ ಭರವಸೆಯಂತೆ ಯಾವುದೇ ಸಬೂಬು ನೀಡದೆ ಮೀಸಲಾತಿ ನೀಡುವಂತೆ ನಾಯಕ ಸಮಾಜದ ಯುವ ಮುಖಂಡ ಪಿ.ಬಿ. ಅಂಜುಕುಮಾರ್ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

## ಸೈಯ್ಯದ್ ಶುಕೂರ್ ನೇಮಕ




ಕೂಡ್ಲಿಗಿ, ಮಾ.10- ಆಲ್ ಇಂಡಿಯಾ ಮುಸ್ಲಿಂ ಡೆವಲಪ್‌ಮೆಂಟ್ ಫೋರಂ ಸಂಘಟನೆಯ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ಪಟ್ಟಣದ ಪಂಚಾಯತ್ ಸದಸ್ಯರು ಹಾಗೂ ಸಮಾಜ ಸೇವಕರಾದ ಸೈಯ್ಯದ್ ಶುಕೂರ್ ಅವರನ್ನು ನೇಮಕ ಮಾಡಲಾಗಿದೆ.

## ಉಪ್ಪಾರ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಮಾ.10- ಜಿಲ್ಲಾ ಉಪ್ಪಾರ ಸಂಘ, ಜಿಲ್ಲಾ ಉಪ್ಪಾರ ನೌಕರರ ಸಂಘ ಹಾಗೂ ಜಿಲ್ಲಾ ಉಪ್ಪಾರ ಯುವಕರ ಸಂಘಗಳ ಸಂಯುಕ್ತಾಶ್ರಯದಲ್ಲಿ ಗ್ರಾ.ಪಂ., ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರಿಗೆ ಸನ್ಮಾನ ಹಾಗೂ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.85 ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದೆ. ವಿದ್ಯಾರ್ಥಿಗಳು ಅಂಕಪಟ್ಟಿ ಜೆರಾಕ್ಸ್, ಒಂದು ಭಾವಚಿತ್ರ ಮತ್ತು ವರ್ಗಾವಣೆ ಪ್ರಮಾಣ ಪತ್ರ ಹಾಗೂ ನೂತನವಾಗಿ ಆಯ್ಕೆಯಾಗಿರುವ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ತಮ್ಮ ಮಾಹಿತಿಯನ್ನು ದಾವಣಗೆರೆ ತಾಲ್ಲೂಕು, ಉಪ್ಪಾರ ವಿದ್ಯಾರ್ಥಿ ನಿಲಯ, ಭಗೀರಥ ರಸ್ತೆ, 7ನೇ ಮೇನ್, 6ನೇ ಕ್ರಾಸ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ ಇಲ್ಲಿಗೆ ಇದೇ ದಿನಾಂಕ 15 ರೊಳಗೆ ಸಲ್ಲಿಸುವುದು. ವಿವರಕ್ಕೆ ಜಿ. ರಾಮಪ್ಪ: 9449204792, ಹೆಚ್.ಡಿ. ಮಾರುತಿ (784692300) ಸಂಪರ್ಕಿಸಲು ಅಧ್ಯಕ್ಷ ಎನ್.ಎಸ್. ಚಂದ್ರಪ್ಪ, ಕಾರ್ಯದರ್ಶಿ ಹೆಚ್. ರಾಜು ತಿಳಿಸಿದ್ದಾರೆ.

## ಅಧ್ಯಕ್ಷರಾಗಿ ಶಿವಮೂರ್ತಯ್ಯ, ಉಪಾಧ್ಯಕ್ಷರಾಗಿ ಎಂ. ಮೀನಾಕ್ಷಿ




ದಾವಣಗೆರೆ, ಮಾ.10- ಬಸಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಶಿವಮೂರ್ತಯ್ಯ, ಉಪಾಧ್ಯಕ್ಷರಾಗಿ ಎಂ. ಮೀನಾಕ್ಷಿ ಆಯ್ಕೆಯಾಗಿದ್ದಾರೆ.

## ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿಗೆ ಡಾ|| ಸುದರ್ಶನ ಬಲ್ಲಾಳ ಆಯ್ಕೆ



ರಂಭಾಪುರಿ ಪೀಠ (ಬಾಳೆಹೊನ್ನೂರು), ಮಾ. 10- ಜಗದ್ಗುರು ರಂಭಾಪುರಿ ವೀರ ಸಿಂಹಾಸನ ಮಹಾಸಂಸ್ಥಾನ ಪೀಠದಿಂದ ಪ್ರತಿ ವರ್ಷ ಕೊಡಲ್ಪಡುವ ಶ್ರೀ ಜಗದ್ಗುರು ರೇಣುಕಾಚಾರ್ಯ ಅತ್ಯುನ್ನತ ಪ್ರಶಸ್ತಿಯನ್ನು ಈ ವರ್ಷ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗಳ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ|| ಸುದರ್ಶನ ಬಲ್ಲಾಳರಿಗೆ ಪ್ರದಾನ ಮಾಡಲಾಗುವುದೆಂದು ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಸ್ವಾಮೀಜಿ ತಿಳಿಸಿದ್ದಾರೆ. ಪ್ರಶಸ್ತಿಯು ಒಂದು ಲಕ್ಷ ರೂಪಾಯಿ ನಗದು, ಕಂಚಿನ ಪ್ರಶಸ್ತಿ ಪತ್ರಗಳನ್ನು ಒಳಗೊಂಡಿದೆ. ಬರಲಿರುವ ಮಾರ್ಚ್ 26ರಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ಮಾ.26ರಂದು ಭಾರತ್ ಬಂದ್‌ಗೆ ರೈತ ಸಂಘಟನೆಗಳ ಕರೆ

ನವದೆಹಲಿ, ಮಾ. 10 – ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತ ಸಂಘಟನೆಗಳು, ಮಾರ್ಚ್ 26ರಂದು ಭಾರತ್ ಬಂದ್‌ಗೆ ಕರೆ ನೀಡಿದ್ದಾರೆ. ಮಾರ್ಚ್ 15ರಂದು ತೈಲ ಬೆಲೆ ಏರಿಕೆ ಹಾಗೂ ರೈಲ್ವೆ ಖಾಸಗೀಕರಣದ ವಿರುದ್ಧ ಕಾರ್ಮಿಕ ಸಂಘಟನೆಗಳ ಜೊತೆಗೂಡಿ ಪ್ರತಿಭಟನೆ ನಡೆಸುವುದಾಗಿಯೂ ರೈತ ಮುಖಂಡ ಬೂಟಾ ಸಿಂಗ್ ಬುರ್ಜಗಿಲ್ ಹೇಳಿದ್ದಾರೆ.

## ಮಾಜಿ ಡಿಜಿಪಿ ಮೇಲ್ ಹ್ಯಾಕ್ : ಬಂಧನ

ಬೆಂಗಳೂರು, ಮಾ. 10 – ಮಾಜಿ ಡಿ.ಜಿ.ಪಿ. ಶಂಕರ್ ಬಿದರಿ ಅವರ ಇ-ಮೇಲ್ ಹ್ಯಾಕ್ ಮಾಡಿ 25 ಸಾವಿರ ರೂ. ವಂಚಿಸಿದ ಆರೋಪದ ಮೇಲೆ ನಾಗಾಲ್ಯಾಂಡ್‌ನ ಓರ್ವ ಮಹಿಳೆ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

## ಹಳೇಬಾತಿಯಲ್ಲಿ ಗ್ರಾಮಸಭೆ




ದಾವಣಗೆರೆ, ಮಾ.10- ತಾಲ್ಲೂಕಿನ ಹಳೇಬಾತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಗ್ರಾಮ ಸಭೆ ನಡೆಸಲಾಯಿತು. ಹಳೇಬಾತಿ ಗುಡ್ಡದ ಕ್ಯಾಂಪ್ ಮತ್ತು ನೀಲಾನಹಳ್ಳಿ ಗ್ರಾಮಗಳಲ್ಲಿ ನಿಗದಿತ ವೇಳೆಗೆ ಗ್ರಾಮ ಸಭೆ ನಡೆದವು. ನೋಡಲ್ ಅಧಿಕಾರಿ ಡಾ. ಎಸ್.ಬಿ. ಚಂದ್ರಶೇಖರ್, ಗ್ರಾ.ಪಂ. ಅಧ್ಯಕ್ಷ ಎಸ್.ಆರ್. ಸಿದ್ದೇಶ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

## ಹರಿಹರ : ಪೊಲೀಸ್ ವೃತ್ತ ಕಚೇರಿಯಲ್ಲಿ ಮಹಿಳಾ ದಿನ



ಹರಿಹರ, ಮಾ.10- ನಗರದ ಪೊಲೀಸ್ ವೃತ್ತ ಕಚೇರಿಯಲ್ಲಿ ಇಂದು ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ಸವಿತಾ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ನರಸಿಂಹರಾಜು ತಾಮ್ರಧ್ವಜ, ಸಿಪಿಐ ಸತೀಶ್ ಕುಮಾರ್, ಮಲೇಬೆನ್ನೂರು ಠಾಣೆಯ ಪಿಎಸ್‌ಐ ವೀರಬಸಪ್ಪ ಕುಸಲಪೂರ್, ಬಿಳಿಚೋಡು ಪಿಎಸ್‌ಐ ಶೈಲಾಶ್ರೀ, ಎಎಸ್‌ಐ ಮಂಜುಳಾ, ಸಿಬ್ಬಂದಿಗಳಾದ ಸುಶೀಲಮ್ಮ, ಸುಜಾತ, ಪವಿತ್ರ ಸತೀಶ್ ಇನ್ನಿತರರಿದ್ದರು.

## ಅಮೋಘ ಪವಾರ್‌ಗೆ ಕರುನಾಡ ಗಾನ ನಕ್ಷತ್ರ ಪ್ರಶಸ್ತಿ



ದಾವಣಗೆರೆ, ಮಾ.10- ಕೊಪ್ಪಳದ ಹೈಬ್ರೀಡ್ ಸುದ್ದಿವಾಹಿನಿಯು ನಡೆಸಿದ ವಾರ್ಷಿಕ ಸಮಾರಂಭದಲ್ಲಿ ಹತ್ತನೇ ವಯಸ್ಸಿನ ಅಮೋಘ ಪವಾರ್ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದಲ್ಲಿ ಮಾಡಿರುವ ಸಾಧನೆಯನ್ನು ಗುರ್ತಿಸಿ ಕರುನಾಡ ಗಾನ ನಕ್ಷತ್ರ 2021- ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕಾರ್ಯಕ್ರಮದಲ್ಲಿ ನಂದೀಪುರ ಮಠದ ಶ್ರೀ ಮಹೇಶ್ವರ ಸ್ವಾಮೀಜಿ, ಬಳ್ಳಾರಿಯ ಶ್ರೀ ಕಲ್ಯಾಣ ಸ್ವಾಮೀಜಿ, ಹಿರೇಮಠದ ಶ್ರೀ ಅಭಿನವ ಚರಂತೇಶ್ವರ ಸ್ವಾಮಿ, ಪತ್ರಕರ್ತ ಡಾ. ಬಿ.ಎನ್. ಹೊರಪೇಟೆ, ಕನ್ನಡ ಕೋಗಿಲೆ ಖ್ಯಾತಿಯ ಖಾಸಿಂ ಉಪಸ್ಥಿತರಿದ್ದರು.

ಪವಾರ್ ಸಾಧನೆಗೆ 17ನೇ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಹಾಗೂ ಅಜ್ಜನವರಾದ ಅಜ್ಜಪ್ಪ ಪವಾರ್, ಸಂಗೀತ ಗುರುಗಳಾದ ಆನಂದ ಆರ್. ಪಾಟೀಲ ಹಾಗೂ ಯೂರೋ ಸ್ಕೂಲ್ ಶಿಕ್ಷಕರು ಸಂತಸ ವ್ಯಕ್ತಪಡಿಸಿದ್ದಾರೆ.

### ಅಪಾರ್ಥ

ಸಾಕಷ್ಟು ಸಂಪಾದಿಸಿಯೂ
ಬೋಳಾದ ಎನ್ನ
ಮಂಡೆಯನು
ಸುರ ಸುಂದರಿಯರು
ನೋಡಿ ವಯಸ್ಸಾಗಿದೆ
ಎಂದು ಭಾವಿಸುವರು
ಅಪಾರ್ಥ
ಇದಕೆ ನನಗನಿಸುತ್ತಿದೆ
ಅವನ ಪ್ರೀತಿಯು ದಕ್ಕದ
ಎನಗೆ ಏನಿದ್ದರೇನಂತೆ
ಎಲ್ಲಾ ವ್ಯರ್ಥ!
**- ಬಸವನಗೌಡ ಹೆಬ್ಬಳಗೆರೆ.**

## ಜಾನಪದ ಸಂಭ್ರಮ, ನೃತ್ಯ ಸ್ಪರ್ಧೆಗೆ ಆಹ್ವಾನ

ದಾವಣಗೆರೆ, ಮಾ. 10- ನಗರದ ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿರುವ ವಿನೂತನ ಮಹಿಳಾ ಸಮಾಜದಲ್ಲಿ ಇದೇ ದಿನಾಂಕ 17ರ ಬುಧವಾರ ಮಧ್ಯಾಹ್ನ 2 ಗಂಟೆಗೆ ಮಹಿಳಾ ದಿನಾಚರಣೆ ಪ್ರಯುಕ್ತ ಜಾನಪದ ಸಂಭ್ರಮ ಕಾರ್ಯಕ್ರಮ ಹಾಗೂ ಕರ್ನಾಟಕ ಜಾನಪದ ನೃತ್ಯ ಸ್ಪರ್ಧೆ ನಡೆಯಲಿದೆ.

ಆಸಕ್ತ 20 ವರ್ಷ ಮೇಲ್ಪಟ್ಟ 5 ರಿಂದ 6 ಜನ ಮಹಿಳೆಯರ ತಂಡಗಳು 94800 65748, 9663823664 ನಂಬರ್‌ಗೆ ಕರೆ ಮಾಡಿ ಹೆಸರು ನೋಂದಾಯಿಸಬಹುದಾಗಿದೆ.

## ಅಹಿಂದ ಪ್ರಜಾಶಕ್ತಿ ಉಪಾಧ್ಯಕ್ಷರಾಗಿ ಆರ್. ಹನುಮಂತಪ್ಪ

ದಾವಣಗೆರೆ, ಮಾ.10- ಅಹಿಂದ ಪ್ರಜಾಶಕ್ತಿ ಸಂಘಟನೆಯ ಜಿಲ್ಲಾ ಉಪಾಧ್ಯಕ್ಷರಾಗಿ ಆರ್. ಹನುಮಂತಪ್ಪ ನೇಮಕಗೊಂಡಿದ್ದಾರೆ.




• ಗಾರ್ಡನ್ 'ಸೆಕೆಂಡ್ಸ್' ಸೀರೆಗಳು ಮತ್ತು ಡ್ರೆಸ್ ಫ್ಯಾಬ್ರಿಕ್‌ಗಳಲ್ಲಿ ವಿನೂತನ ಡಿಸೈನ್‌ಗಳು.
• ಟ್ರೆಂಡಿ ಪ್ರಿಂಟ್ಸ್! ಇನ್ನೂ ಹಲವಾರು!
ರೂ. 590/- ಕ್ಕೆ ವಿಶೇಷ ಕೊಡುಗೆಯ ಕೌಂಟರ್ ನಿಂದ ಯಾವುದೇ 2 ಸೀರೆ ಖರೀದಿಸಿ!
• ರಂಗ ಮಹಲ್,
#68, 2 ನೇ ಮೇನ್, ಅಕ್ಕಮಹಾದೇವಿ ರೋಡ್, (ಎ. ವಿ. ಕೆ. ಕಾಲೇಜು)
ಪಿ ಜೆ ಎಕ್ಸ್‌ಟೆನ್ಷನ್, ದಾವಣಗೆರೆ.
• ಸೀರೆಗಳು ₹ 295/-ರಿಂದ
• ಡ್ರೆಸ್ ಫ್ಯಾಬ್ರಿಕ್ಸ್ ಪ್ರತಿ ಮೀಟರ್ ₹ 68/-ರಿಂದ
ಸಮಯ : ದಿನವೂ ಬೆಳಿಗ್ಗೆ 10ರಿಂದ ಸಂಜೆ 8.00ರ ವರೆಗೆ (ರವಿವಾರವೂ ತೆರೆದಿದೆ)
Garden VARELI
www.gardenvareli.com




ಹೃದಯಪೂರ್ವಕ ಅಭಿನಂದನೆಗಳು
ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಮೆಂಬರ್ ಆಗಿ ನೇಮಕವಾಗಿರುವ ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ಕಾರ್ಯದರ್ಶಿಗಳೂ ಆದ
ಶ್ರೀ ರಮೇಶ್ ಬಿ.ಜೆ.
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.


ಎಸ್.ಬಿ. ಹನುಮಂತಪ್ಪ ಜರೇಕಟ್ಟೆ ಮತ್ತು ಸ್ನೇಹಿತರು
ಎಸ್ ರಾಜಶೇಖರ್, ಶಿವ ಮೆಡಿಕಲ್ಸ್ ಮತ್ತು ಸ್ನೇಹಿತರು


## ವಿಶ್ವಕೋಶಕ್ಕೆ ಮಾಹಿತಿ

ದಾವಣಗೆರೆ, ಮಾ.10- ಕರ್ನಾಟಕ ಯಕ್ಷಗಾನ ಅಕಾಡೆಮಿಯು ಈ ಸಾಲಿನಲ್ಲಿ ಮೂಡಲಪಾಯ ವಿಶ್ವ ಕೋಶವನ್ನು ಹೊರತರಬೇಕೆಂದು ಯೋಜನೆ ಹಮ್ಮಿಕೊಂಡಿದೆ. ಈಗಾಗಲೇ ಮಾಹಿತಿ ಸಂಗ್ರಹಿಸುವ ಕಾರ್ಯ ಆರಂಭವಾಗಿದ್ದು, ಈ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನ, ಛಾಯಾಚಿತ್ರ, ಬಣ್ಣದ ಚಿತ್ರ, ಹಸ್ತಪ್ರತಿಗಳು, ಛಂದಸ್ಸು, ಕಾವ್ಯದ ಸೌಂದರ್ಯ, ಬಣ್ಣಗಾರಿಕೆ, ಪಾತ್ರಗಳ ವೈಶಿಷ್ಟ್ಯತೆ, ಗೆಜ್ಜೆಪೂಜೆ, ಯಕ್ಷಗಾನ ಕೇಂದ್ರಗಳು, ಭಾಗವತರು, ಕಲಾವಿದರು, ವಾದ್ಯ, ವೇಷ-ಭೂಷಣದ, ಮೂಡಲಪಾಯದ ತಾಳ, ಹೆಜ್ಜೆ ಗುರುತುಗಳ ಕುರಿತು ಮಾಹಿತಿ ಸಂಗ್ರಹಿಸಲಾಗಿದೆ. ಹೆಚ್ಚಿನ ವಿವರಗಳು ತಮಗೆ ತಿಳಿದಿದ್ದಲ್ಲಿ ಅಕಾಡೆಮಿಯ ಇ-ಮೇಲ್ ಅಥವಾ ಅಂಚೆ, ಕೊರಿಯರ್ ಮೂಲಕ ಮಾಹಿತಿ ಕಳುಹಿಸಲು ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎ. ಹೆಗಡೆ ತಿಳಿಸಿದ್ದಾರೆ.

## ಹರಿಹರದಲ್ಲಿ ನಾಳೆ

ಹರಿಹರ, ಮಾ.10- ನಾಡಿದ್ದು ದಿನಾಂಕ 12 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆ ವರೆಗೆ ನಗರಸಭೆಯಲ್ಲಿ ಶಾಸಕ ಎಸ್. ರಾಮಪ್ಪ ಅವರಿಂದ ಜನಸ್ಪಂದನಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅಹವಾಲು ಸ್ವೀಕರಿಸಲಿದ್ದಾರೆ.

ನಗರಸಭಾ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ತಮ್ಮ ಕುಂದು ಕೊರತೆಗಳ ಬಗ್ಗೆ ಮನವಿ ಸಲ್ಲಿಸಲು ಪೌರಾಯುಕ್ತರು ತಿಳಿಸಿದ್ದಾರೆ.

## ಹಡಗಲಿ: ಕಾಂಗ್ರೆಸ್ ಕಿಸಾನ್ ಸಭಾ ಅಧ್ಯಕ್ಷರಾಗಿ ಹಾಲೇಶ್



ಹೂವಿನಹಡಗಲಿ, ಮಾ.10- ತಾಲ್ಲೂಕು ಕಾಂಗ್ರೆಸ್ ಕಿಸಾನ್ ಸಭಾದ ಅಧ್ಯಕ್ಷರಾಗಿ ತಾ.ಪಂ. ಸದಸ್ಯರು, ಯುವ ಮುಖಂಡರು, ಪ್ರಗತಿಪರ ರೈತರಾದ ಸೋಗಿ ಹಾಲೇಶ್ ನೇಮಕಗೊಂಡಿದ್ದಾರೆ.

## ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿದ್ದ ಬಸವಾದಿ ಶರಣರು



ಹರಪನಹಳ್ಳಿ, ಮಾ.10- ಬಸವಾದಿ ಶರಣರು ಅನುಭವ ಮಂಟಪದಲ್ಲಿ ಮೊಟ್ಟ ಮೊದಲ ಬಾರಿಗೆ ಮಹಿಳೆಯರಿಗೆ ಪ್ರಾತಿನಿಧ್ಯವನ್ನು ನೀಡುವ ಮೂಲಕ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿದರು ಎಂದು ಕೆಪಿಸಿಸಿ ಮಹಿಳಾ ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ತಾಲ್ಲೂಕಿನ ನೀಲಗುಂದ ಗ್ರಾಮದ ಗುಡ್ಡದ ವಿರಕ್ತಮಠದ ಆವರಣದಲ್ಲಿ ಎಂ.ಪಿ. ರವೀಂದ್ರ ಪ್ರತಿಷ್ಠಾನ ಮತ್ತು ನೀಲಗುಂದ ಜಂಗಮ ಪೀಠ ಗುಡ್ಡದ ವಿರಕ್ತ ಮಠ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಿಳಾ ದಿನಾಚರಣೆ ಅಂಗವಾಗಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಮಹಿಳೆಯರಿಗೆ ಸೀರೆ ಮತ್ತು ಕುಪ್ಪಸ ಕೊಟ್ಟು ಉಡಿ ತುಂಬಿ ಗೌರವಿಸಿದರು. ಗುಡ್ಡದ ವಿರಕ್ತಮಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ, ಬೆಳ್ಳಟ್ಟಿ ಶ್ರೀ ಬಸವರಾಜ ಸ್ವಾಮೀಜಿ, ಮಲ್ಲನಕೆರೆ ಶ್ರೀ ಗುರುಚನ್ನಬಸವ ಸ್ವಾಮೀಜಿ,

**ಎಂ.ಪಿ.ಲತಾ ಮಲ್ಲಿಕಾರ್ಜುನ್**

ಲಿಂಗಾನಾಯಕನಹಳ್ಳಿ ಶ್ರೀ ಚನ್ನವೀರ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಗ್ರಾ.ಪಂ. ಅಧ್ಯಕ್ಷೆ ಹನುಮಂತಿಬಾಯಿ ಅಧ್ಯಕ್ಷತೆ ವಹಿಸಿದ್ದರು. ಜಿ.ಪಂ. ಸದಸ್ಯ ಹೆಚ್.ಬಿ. ಪರುಶುರಾಮಪ್ಪ, ತಾ.ಪಂ. ಸದಸ್ಯ ಹುಲಿಕಟ್ಟಿ ಚಂದ್ರಪ್ಪ, ನೀಲಗುಂದ ಗ್ರಾ.ಪಂ. ಉಪಾಧ್ಯಕ್ಷೆ ಗೀತಾ ಮಹೇಶಪ್ಪ, ಕಡಬಗೆರೆ ಗ್ರಾ.ಪಂ. ಅಧ್ಯಕ್ಷೆ ಅನುಷಾ ಮಂಜುನಾಥ, ನಂದಿಬೇವೂರು ಗ್ರಾ.ಪಂ. ಅಧ್ಯಕ್ಷೆ ಸುಶೀಲಮ್ಮ, ಉಪಾಧ್ಯಕ್ಷೆ ಲಕ್ಷ್ಮಿದೇವಿ, ಪುಷ್ಪಾ ದಿವಾಕರ್, ಹೆಚ್. ಎಂ.ಲಲಿತಮ್ಮ ಕಂಚಿಕೇರಿ ಪಿ. ಜಯಲಕ್ಷ್ಮಿ, ಕವಿತಾ ಸುರೇಶ್, ಮೇಘರಾಜ್, ಕಾನಹಳ್ಳಿ ರುದ್ರಪ್ಪ, ಗೊಂಗಡಿ ಸಹನ ರಾಜಣ್ಣ, ಹಲುವಾಗಲು ರತ್ನಮ್ಮ ರೇಣುಕಮ್ಮ ವನಜಾಕ್ಷಮ್ಮ, ಉಮಾ ಶಂಕರ್, ಉದಯಶಂಕರ್, ಮತ್ತೂರು ಬಸವರಾಜ್, ಕಲ್ಲಹಳ್ಳಿ ಗೋಣೆಪ್ಪ, ಶಿವಪುತ್ರ, ಯರಬಾಳು ರುದ್ರಪ್ಪಇನ್ನಿತರರಿದ್ದರು.


ಕರ್ನಾಟಕ ಗ್ರಾಮೀಣ ಬ್ಯಾಂಕ್
(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)
ಪ್ರಾದೇಶಿಕ ಕಚೇರಿ : ನಂ.496/66, ಸಂತೋಷ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ದಾವಣಗೆರೆ-577 004 ಫೋನ್: 08192 - 223913, 233632 e-mail: rodvg@kgbk.in
ತಿದ್ದುಪಡಿ
ದಿನಾಂಕ : 10-03-2021ರ ಜನತಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ನಮ್ಮ ಬ್ಯಾಂಕಿನ ಚಿನ್ನಾಭರಣ ಬಹಿರಂಗ ಹರಾಜು ಜಾಹಿರಾತಿನಲ್ಲಿ ಹರಪನಹಳ್ಳಿ ತಾಲ್ಲೂಕು, ಅರಸೀಕರೆ ಶಾಖೆಯೆಂದು ತಪ್ಪಾಗಿ ಪ್ರಕಟಗೊಂಡಿದೆ. ಅದನ್ನು ಹರಪನಹಳ್ಳಿ ತಾಲ್ಲೂಕು ಕಂಚಿಕೆರೆ ಶಾಖೆ ಎಂದು ತಿದ್ದಿಕೊಂಡು ಓದಿಕೊಳ್ಳಬೇಕಾಗಿ ವಿನಂತಿ.
ಸ್ಥಳ : ದಾವಣಗೆರೆ
ದಿನಾಂಕ : 10-03-2021
ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ಕಛೇರಿ,ದಾವಣಗೆರೆ.



ಡಾ|| ಪ್ರಮೋದ್ ಜಿ. ಆರ್.
ಎಂ.ಡಿ.(ಜನರಲ್ ಮೆಡಿಸಿನ್) ಡಿ.ಎಂ. (ನೆಫ್ರೋಲಜಿ, ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜ್),
ಕಿಡ್ನಿ ಮತ್ತು ಮೂತ್ರ ರೋಗ ತಜ್ಞರು
ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆ.
World Kidney Day
11 March 2021
8 ಗೋಲ್ಡನ್ ನಿಯಮಗಳು ನಿಮ್ಮ ಕಿಡ್ನಿಗಳ ಆರೋಗ್ಯಕ್ಕಾಗಿ
ಸಧೃಡ ಮತ್ತು ಕ್ರಿಯಾಶೀಲತೆ
ಪೌಷ್ಠಿಕ ಆಹಾರವನ್ನು ಸೇವಿಸಿ
ನಿಮ್ಮ ರಕ್ತದಲ್ಲಿನ ಸಕ್ಕರೆ ಅಂಶವನ್ನು ಪರಿಶೀಲಿಸಿ ಮತ್ತು ನಿಯಂತ್ರಿಸಿ
ಅಧಿಕ ರಕ್ತದೊತ್ತಡವನ್ನು ನಿಯಂತ್ರಿಸಿ
ಸೂಕ್ತ ಪ್ರಮಾಣದ ದ್ರವಗಳನ್ನು ತೆಗೆದುಕೊಳ್ಳಿ
ಧೂಮಪಾನ ಮಾಡಬೇಡಿ
ನೋವು ನಿವಾರಕ ಮಾತ್ರೆಗಳನ್ನು ಮಿತವಾಗಿ ತೆಗೆದುಕೊಳ್ಳಿ
ಮಧುಮೇಹ, ಅಧಿಕ ರಕ್ತದೊತ್ತಡ, ಬೊಜ್ಜು, ಅಂಥ ಅಂಶಗಳನ್ನು ಹೊಂದಿದ್ದರೆ ನಿಮ್ಮ ಮೂತ್ರಪಿಂಡದ ಕಾರ್ಯವನ್ನು ಪರೀಕ್ಷಿಸಿ
1. ಚೇತನ ಸ್ಪೆಷಾಲಿಟಿ ಪಾಲಿಕ್ಲಿನಿಕ್
#197, 3 ನೇ ಮೇನ್, ವೀರೇಶ್ ಇ.ಎನ್. ಟಿ ಆಸ್ಪತ್ರೆ ಎದುರು, ಪಿ.ಜೆ. ಬಡಾವಣೆ, ದಾವಣಗೆರೆ.
ನೋಂದಣಿಗಾಗಿ : 73492 52524, ಸಲಹಾ ವೇಳೆ: ಮಧ್ಯಾಹ್ನ 1.00 ರಿಂದ 2.00, ಸಂಜೆ 6.30 ರಿಂದ 8.30 ರವರೆಗೆ
2. ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಹೊರರೋಗಿ ವಿಭಾಗ

# ಆಕ್ಷೇಪಾರ್ಹ ವಿಡಿಯೋ ಪ್ರಸಾರ ಮಾಡಿದರೆ ಕ್ರಮ, ಎಚ್ಚರಿಕೆ

ಬೆಂಗಳೂರು, ಮಾ. 10 – ಸುದ್ದಿ ವಾಹಿನಿಗಳು 'ಪ್ರಸಾರ ಸಂಹಿತೆ'ಗೆ ಬದ್ಧವಾಗಿರಬೇಕು. ಆಕ್ಷೇಪಾರ್ಹ ವಿಡಿಯೋಗಳನ್ನು ಪ್ರಸಾರ ಮಾಡಿದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಬೆಂಗಳೂರು ಪೊಲೀಸರು ಎಚ್ಚರಿಕೆ ನೀಡಿದ್ದಾರೆ. ಕೆಲ ಸುದ್ದಿ ವಾಹಿನಿಗಳು ಮಾಜಿ ಮಂತ್ರಿ ರಮೇಶ್ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ರಾಸಲೀಲೆ ವಿಡಿಯೋ ಪ್ರಸಾರ ಮಾಡಿದ ಹಿನ್ನೆಲೆಯಲ್ಲಿ ಈ ಎಚ್ಚರಿಕೆ ಪ್ರಾಮುಖ್ಯತೆ ಪಡೆದುಕೊಂಡಿದೆ.

ರಮೇಶ್ ಜಾರಕಿಹೊಳಿ ಅವರು ರಾಜೀನಾಮೆ ನೀಡಿದ ಕೆಲ ದಿನಗಳ ನಂತರ ಕೆಲ ವಾಹಿನಿಗಳು ಸಿ.ಡಿ. ವಿವಾದದ ವಿಡಿಯೋ ಪ್ರಸಾರ ಮಾಡಿವೆ. ಮಂಗಳವಾರದಂದು ಬೆಂಗಳೂರು ಪೊಲೀಸ್ ಆಯುಕ್ತ ಕಮಲ್ ಪಂತ್ ಅವರು ನಿರ್ಬಂಧದ ಆದೇಶ ಹೊರಡಿಸಿದ್ದಾರೆ.

ಕೇಬಲ್ ಟಿ.ವಿ. ಜಾಲ (ನಿಯಂತ್ರಣ) ಕಾಯ್ದೆ, 1995ರ ಅನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ಈ ನಿರ್ದೇಶನ ನೀಡಲಾಗುತ್ತಿದೆ. ಕಾರ್ಯಕ್ರಮ ಪ್ರಸಾರ ಸಂಹಿತೆಗೆ ವಿರುದ್ಧವಾಗಿ ಯಾವುದೇ ವಿಷಯ ಪ್ರಸಾರ ಮಾಡಬಾರದು ಎಂದು ತಿಳಿಸಲಾಗಿದೆ. ನಿಯಮ ಉಲ್ಲಂಘಿಸಿದರೆ ಕಾಯ್ದೆಯ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪಂತ್ ತಿಳಿಸಿದ್ದಾರೆ. ಸುದ್ದಿ ವಾಹಿನಿಗಳು ಆಕ್ಷೇಪಾರ್ಹ ವಿಡಿಯೋ ಪ್ರಸಾರ ಮಾಡುವುದನ್ನು ತಡೆಯಲು ಕಾಯ್ದೆ ಜಾರಿಗೆ ತರಲೂ ಸಹ ರಾಜ್ಯ ಸರ್ಕಾರ ಪರಿಶೀಲನೆ ನಡೆಸುತ್ತಿದೆ.





**'ಜನತಾವಾಣಿ'ಗೆ ಡಿ.ಆರ್.ಆರ್. ಪಾಲಿಟೆಕ್ನಿಕ್ ವಿದ್ಯಾರ್ಥಿಗಳ ಅಧ್ಯಯನ ಭೇಟಿ**

ದಾವಣಗೆರೆ, ಮಾ. 10– ನಗರದ ಡಿ.ಆರ್.ಆರ್. ಸರ್ಕಾರಿ ಪಾಲಿಟೆಕ್ನಿಕ್‌ನ ಕಮರ್ಷಿಯಲ್ ಪ್ರಾಕ್ಟೀಸ್ ಕನ್ನಡ ಹಾಗೂ ಇಂಗ್ಲಿಷ್ ವಿಭಾಗದ ವಿದ್ಯಾರ್ಥಿಗಳು 'ಜನತಾವಾಣಿ' ದಿನಪತ್ರಿಕೆಗೆ ಶೈಕ್ಷಣಿಕ ಕಾರ್ಯಕ್ರಮದಡಿ ಅಧ್ಯಯನ ಭೇಟಿ ನೀಡಿದ್ದರು.

ಪತ್ರಿಕೆಯ ಹಲವಾರು ವಿಭಾಗಗಳ ಕಾರ್ಯನಿರ್ವಹಣೆ ಬಗ್ಗೆ ಈ ಸಂದರ್ಭದಲ್ಲಿ ಅವರು ಮಾಹಿತಿ ಸಂಗ್ರಹಿಸಿದರು. ಈ ಸಂದರ್ಭದಲ್ಲಿ ಜನತಾವಾಣಿ ದಿನಪತ್ರಿಕೆಯ ಸಂಪಾದಕ ಎಂ.ಎಸ್. ವಿಕಾಸ್, ಪಾಲಿಟೆಕ್ನಿಕ್‌ನ ವಿಭಾಗಾಧಿಕಾರಿ ಎಸ್.ಸಿ. ಬಿಳಿಕೇರಿ, ಉಪನ್ಯಾಸಕರಾದ ಕೆ.ಬಿ. ರುದ್ರೇಶ್, ಎಸ್. ನಾಗರಾಜ್, ಬಿ. ಸಿದ್ದಮೂರ್ತಿ, ಟಿ.ಹೆಚ್.ಎಂ. ಬಸವರಾಜ್ ಉಪಸ್ಥಿತರಿದ್ದರು.

ಪತ್ರಿಕೆಯ ಸಿಬ್ಬಂದಿ ಯಶೋಧ ಅಗಡಿಮಠ, ಎಸ್.ಎ. ಶ್ರೀನಿವಾಸ್, ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ, ಮಂಜುಳ ನಾಗರಾಜ್, ಶೀಲಾ ವೀರಭದ್ರಪ್ಪ, ಅಣ್ಣಪ್ಪ, ಚಂದ್ರಪ್ಪ, ಮೊಹಮ್ಮದ್ ರಫಿ ಮತ್ತಿತರರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

# ಜಗಳೂರು: ಬೇಡಿಕೆಗಳ ಈಡೇರಿಕೆಗಳಿಗಾಗಿ ಆಗ್ರಹಿಸಿ ಕಟ್ಟಡ ಕಾರ್ಮಿಕರಿಂದ ಪ್ರತಿಭಟನೆ




ಜಗಳೂರು, ಮಾ.10- ವಿವಿಧ ಬೇಡಿಕೆಗಳ ಈಡೇರಿಕೆಗಳಿಗಾಗಿ ಆಗ್ರಹಿಸಿ ಎಐಟಿಯುಸಿ ನೇತೃತ್ವದಲ್ಲಿ ಕಟ್ಟಡ ಮತ್ತು ಕಲ್ಲು ಕ್ವಾರಿ ಕಾರ್ಮಿಕರು ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಮಾಹಾತ್ಮಗಾಂಧಿ ವೃತ್ತ , ಡಾ. ಬಿ. ಆರ್. ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಕಛೇರಿ ಮುಂಭಾಗಕ್ಕೆ ಆಗಮಿಸಿದರು.

ಎಐಟಿಯುಸಿ ಜಿಲ್ಲಾಧ್ಯಕ್ಷ ಲಕ್ಷ್ಮಣ ಮಾತನಾಡಿ, ಕಾಮನ್ ಸರ್ವೀಸ್ ಸೆಂಟರ್‌ಗಳಲ್ಲಿ ಕಾರ್ಮಿಕರ ಗುರುತಿನ ಚೀಟಿ ನವೀಕರಣ ಮಾಡುವಾಗ ಸಾಕಷ್ಟು ಲೋಪ ದೋಷಗಳಿಂದ ಕಾರ್ಮಿಕರ ಸೌಲಭ್ಯಗಳಿಗೆ ತೊಂದರೆಯಾಗುತ್ತಿದೆ. ಕೂಡಲೇ ಸಿಎಸ್‌ಸಿ ಸ್ಥಗಿತಗೊಳಿಸಿ ಸೇವಾ ಸಿಂಧು ಐಡಿ ತೆರೆಯಬೇಕು. ನಕಲಿ ಕಟ್ಟಡ ಮಾಲೀಕರನ್ನು ಸೃಷ್ಟಿಸಿ ಲಕ್ಷಾಂತರ ಜನರು ಕಾರ್ಮಿಕರ ಗುರುತಿನ ಚೀಟಿ ನೋಂದಾಯಿಸಿದ್ದು ಕೂಡಲೇ ತನಿಖೆಯಾಗಬೇಕು. ಹಣದ ಆಸೆಗಾಗಿ ಗ್ರಾಮ ಪಂಚಾಯಿತಿ ಸದಸ್ಯರು, ಕೃಷಿ ಕಾರ್ಮಿಕರು, ಗೃಹಿಣಿಯರಿಗೆ ಕಾರ್ಮಿಕರ ಕಾರ್ಡ್ ವಿತರಿಸಲಾಗಿದೆ. ಇದರಿಂದ ಸಾಕಷ್ಟು ನೈಜ ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ ಎಂದರು.

ತಾಲ್ಲೂಕು ಗೌರವಾಧ್ಯಕ್ಷ ಮಹಮ್ಮದ್ ಭಾಷ ಮಾತನಾಡಿ, ರಾಜ್ಯಾದ್ಯಂತ 10 ಲಕ್ಷದ 152 ಕಾರ್ಮಿಕರಿಗೆ ಕೋವಿಡ್ -19 ಪರಿಹಾರ ಮಂಜೂರಾಗಿಲ್ಲ . ಅಲ್ಲದೆ ತಾಲ್ಲೂಕಿನಲ್ಲಿ ಸಾವಿರ ಫಲಾನುಭವಿಗಳಿಗೆ ಪರಿಹಾರ ಮತ್ತು ನೈಜ ಕಾರ್ಮಿಕರಿಗೆ ಬಾಕಿ ನಿಂತಿರುವ ಸಹಾಯ ಧನದ ಮೊತ್ತ ಕೂಡಲೇ ಬಿಡುಗಡೆಗೊಳಿಸಬೇಕು ಎಂದರು. ಮಹಿಳೆಯರಿಗೆ ಪುರುಷ ಕಾರ್ಮಿಕರಿಗೆ ಭೇದ ಭಾವವಿಲ್ಲದೆ ಸಮನಾಗಿ ತಲಾ 50 ಸಾವಿರ ರೂ. ಸಹಾಯಧನ ಹಾಗೂ ಮಹಿಳೆಯರಿಗೆ ಹೆರಿಗೆ ಭತ್ಯೆ, ಕನಿಷ್ಠ 6 ತಿಂಗಳು ಬಾಣಂತಿ ಹಾರೈಕೆಗೆ ಮಾಸಿಕ 10 ಸಾವಿರ ರೂ. ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ಪಿ.ಕೆ. ಲಿಂಗರಾಜ್, ತಾಲ್ಲೂಕು ಅಧ್ಯಕ್ಷ ವೀರಣ್ಣ, ಉಪಾಧ್ಯಕ್ಷ ರೇಣುಕಾರಾಧ್ಯ, ಕಾರ್ಯದರ್ಶಿಗಳಾದ ತಿಪ್ಪೇಸ್ವಾಮಿ, ವಿ. ಮಂಜುನಾಥ್, ಎಐಎಸ್‌ಎಫ್ ರಾಜ್ಯ ಸಹಕಾರ್ಯದರ್ಶಿ ರಮೇಶ್ ನಾಯ್ಕ, ಸಹಕಾರ್ಯದರ್ಶಿ ಮಾದಿಹಳ್ಳಿ ಕೆ. ಮಂಜಪ್ಪ , ತಾಲ್ಲೂಕು ಮುಖಂಡರಾದ ದೇವಿಕೆರೆ ಮಧು, ಎಚ್. ಎಂ. ಯುವರಾಜ್, ಎಚ್.ಎಂ. ಹೊಳೆ, ತಿಪ್ಪೇಸ್ವಾಮಿ, ಕಾನನಕಟ್ಟೆ ರಶ್ಮಿ ಹಾಗೂ ಕರಿಬಸಪ್ಪ, ವಕೀಲ ಆರ್ ಓಬಳೇಶ್ ಹಾಗು ಇನ್ನಿತರೆ ಕಾರ್ಮಿಕರು ಹಾಜರಿದ್ದರು.

# ಲೋಕಸಭೆಯಲ್ಲಿ ಪ್ರಧಾನಿ ಮಾತಿಗೆ ಗದ್ದಲದ ಅಡ್ಡಿ

ನವದೆಹಲಿ ಮಾ. 10 – ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳು ತುಂಬಲಿರುವ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಲೋಕಸಭೆಯಲ್ಲಿ ಹೇಳಿಕೆ ನೀಡಲು ಬಯಸಿದ್ದರು. ಆದರೆ, ಕಲಾಪಕ್ಕೆ ಅಡ್ಡಿಗಳು ಎದುರಾಗಿರುವುದರಿಂದ ಹೇಳಿಕೆ ನೀಡಲು ಸಾಧ್ಯವಾಗಿಲ್ಲ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ತಿಳಿಸಿದ್ದಾರೆ.

**ಸರ್ವಸಮ್ಮತಿ ನಂತರವೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಬಗ್ಗೆ ಮೋದಿ ಮಾತು**

ಮಾರ್ಚ್ 12ರಂದು ಪ್ರಧಾನಿ ಮೋದಿ ಗುಜರಾತ್‌ನಲ್ಲಿ 'ಆಜಾದಿ ಕಾ ಅಮೃತ್ ಮಹೋತ್ಸವ್' (ಸ್ವಾತಂತ್ರ್ಯದ ಅಮೃತ ಮಹೋತ್ಸವ) ಉದ್ಘಾಟಿಸಲಿದ್ದಾರೆ. ಇದೇ ವೇಳೆ ಅವರು ಸಾಬರಮತಿ ಆಶ್ರಮದಿಂದ 21 ದಿನಗಳ ದಂಡಿ ಯಾತ್ರೆಗೂ ಚಾಲನೆ ನೀಡಲಿದ್ದಾರೆ.

ಪ್ರಧಾನಿ ಹೇಳಿಕೆ ನೀಡಲು ಬಯಸಿದ್ದರು. ಲೋಕಸಭಾಧ್ಯಕ್ಷರು ಅನುಮತಿ ನೀಡಿದರೂ ಸಹ ಸರ್ವಸಮ್ಮತಿ ವ್ಯಕ್ತವಾಗಲಿಲ್ಲ. ಸದನದಲ್ಲಿ ಸರ್ವಸಮ್ಮತಿ ವ್ಯಕ್ತವಾದಾಗ ಪ್ರಧಾನಿ ಹೇಳಿಕೆ ನೀಡಲಿದ್ದಾರೆ ಎಂದು ಲೋಕಸಭೆಯಲ್ಲಿ ಜೋಷಿ ಹೇಳಿದ್ದಾರೆ.

ಇದಕ್ಕೂ ಮುಂಚೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರ ಅಧ್ಯಕ್ಷತೆಯಲ್ಲಿ ಸದನದ ಸರ್ವಪಕ್ಷಗಳ ನಾಯಕರ ಸಭೆ ನಡೆದು, ಸದನದ ಬಿಕ್ಕಟ್ಟು ಅಂತ್ಯಗೊಳಿಸುವ ಕುರಿತು ಚರ್ಚಿಸಲಾಯಿತು. ಕಾಂಗ್ರೆಸ್ ಹೊರತು ಪಡಿಸಿ ಎಲ್ಲ ಪಕ್ಷಗಳು ಪ್ರಸ್ತಾಪಕ್ಕೆ ಸಮ್ಮತಿಸಿದವು ಎಂದು ಮೂಲಗಳು ಹೇಳಿವೆ.

# ತೀರತ್ ಸಿಂಗ್, ಉತ್ತರಾಖಂಡ ಸಿಎಂ

ಡೆಹರಾಡೂನ್, ಮಾ. 10 - ಉತ್ತರಾಖಂಡದ ಮುಂದಿನ ಮುಖ್ಯಮಂತ್ರಿಯಾಗಿ ತೀರತ್ ಸಿಂಗ್ ರಾವತ್ ಅವರನ್ನು ಬಿಜೆಪಿ ಆಯ್ಕೆ ಮಾಡಿದೆ. ತ್ರಿವೇಂದ್ರಸಿಂಗ್ ರಾವತ್ ರಾಜೀನಾಮೆ ನೀಡಿದ್ದರಿಂದ ಈ ಸ್ಥಾನ ತೆರವಾಗಿತ್ತು. ಉತ್ತರಾಖಂಡದ ರಾಜ್ಯಪಾಲೆ ಬೇಬಿ ರಾಣಿ ಮೌರ್ಯ ಅವರು ಸರಳ ಸಮಾರಂಭದಲ್ಲಿ ರಾವತ್‌ಗೆ ಪ್ರಮಾಣ ವಚನ ಬೋಧಿಸಿದ್ದಾರೆ.

# ಪಾಲಿಕೆ ಉಪಚುನಾವಣೆ ವೇಳಾಪಟ್ಟಿ ಪ್ರಕಟ 20 ಮತ್ತು 22 ನೇ ವಾರ್ಡಿಗೆ ಉಪ ಚುನಾವಣೆ

ದಾವಣಗೆರೆ, ಮಾ.10- ರಾಜ್ಯ ಚುನಾವಣಾ ಆಯೋಗದ ಆದೇಶದಂತೆ ಮಹಾನಗರ ಪಾಲಿಕೆಯ 20 ಮತ್ತು 22ನೇ ವಾರ್ಡ್‌ಗಳಲ್ಲಿ ಚುನಾಯಿತ ಸದಸ್ಯರುಗಳ ರಾಜೀನಾಮೆಯಿಂದ ತೆರವಾಗಿರುವ ಸದಸ್ಯರ ಸ್ಥಾನಗಳನ್ನು ತುಂಬಲು ಉಪಚುನಾವಣೆ ನಡೆಸಲಾಗುತ್ತಿದ್ದು, ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ.

ನಗರದ 20ನೇ ವಾರ್ಡ್‌ನ ಭಾರತ್ ಕಾಲೋನಿಯಲ್ಲಿ ಪರಿಶಿಷ್ಟ ಪಂಗಡ (ಮಹಿಳೆ) ಹಾಗೂ 22ನೇ ವಾರ್ಡ್‌ನ ಯಲ್ಲಮ್ಮ ನಗರದಲ್ಲಿ ಸಾಮಾನ್ಯ ಮೀಸಲಾತಿ ನೀಡಲಾಗಿದ್ದು, ಚುನಾವಣೆಗೆ ಸಂಬಂಧಿಸಿದ ವೇಳಾಪಟ್ಟಿಯನ್ನು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಈ ಕೆಳಗಿನಂತೆ ನಿಗದಿಪಡಿಸಿದ್ದಾರೆ.

ನಾಮಪತ್ರಗಳನ್ನು ಸಲ್ಲಿಸಲು ಮಾ.17 ರ ಬುಧವಾರ ಕೊನೆಯ ದಿನಾಂಕ. ಮಾ.18 ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ. ಮಾ.20 ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ. ಮತದಾನ ಅವಶ್ಯವಿದ್ದರೆ, ಮತದಾನವನ್ನು ಮಾ.29 ರ ಸೋಮವಾರ ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸುವ ದಿನವಾಗಿದೆ. ಮಾ.31 ಮತ ಎಣಿಕೆ ಮತ್ತು ಚುನಾವಣಾ ಮುಕ್ತಾಯ ದಿನಾಂಕವಾಗಿದೆ.

**ಚುನಾವಣಾಧಿಕಾರಿಗಳ ವಿವರ :** ವಾರ್ಡ್ ನಂ.20 ಕ್ಕೆ ಚುನಾವಣಾಧಿಕಾರಿಯಾಗಿ ಜಿಲ್ಲಾ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಲಕ್ಷ್ಮೀಕಾಂತ ಬೊಮ್ಮಣ್ಣನವರ್ (ಮೊ. ಸಂ: 9448999219) ಹಾಗೂ ಸಹಾಯಕ ಚುನಾವಣಾಧಿಕಾರಿಯಾಗಿ ಬೀಜ ಪರೀಕ್ಷಾ ಪ್ರಯೋಗಾಲಯ ಸಹಾಯಕ ಕೃಷಿ ನಿರ್ದೇಶಕ ರಮೇಶ್ ನಾಯ್ಕ್. ವಿ (8277931264) ಅವರುಗಳನ್ನು ನೇಮಿಸಲಾಗಿದ್ದು, ಅವರ ಕಚೇರಿಯು ಮಹಾನಗರಪಾಲಿಕೆ ಕೊಠಡಿ ಸಂಖ್ಯೆ 2 ರಲ್ಲಿರುತ್ತದೆ.

ವಾರ್ಡ್ ನಂ.22 ಕ್ಕೆ ಚುನಾವಣಾಧಿಕಾರಿಯಾಗಿ ಉಪವಿಭಾಗಾಧಿಕಾರಿಗಳಾದ ಮಮತ ಹೊಸಗೌಡರ್ ಹಾಗೂ ಸಹಾಯಕ ಚುನಾವಣಾಧಿಕಾರಿಯಾಗಿ ತಹಶೀಲ್ದಾರ್ ಗ್ರೇಡ್-2 ಗಿರೀಶ್ ಬಾಬು ಅವರನ್ನು ನೇಮಿಸಲಾಗಿದ್ದು, ಪಾಲಿಕೆಯ ಕೊಠಡಿ ಸಂಖ್ಯೆ 3 ರಲ್ಲಿ ಇವರ ಕಚೇರಿ ಇರುತ್ತದೆ.


**ಸದಾಚಾರ ಸಂಹಿತೆ ಅನುಷ್ಠಾನ ತಂಡದ ವಿವರ :** ಮಹಾನಗರ ಪಾಲಿಕೆ 20 ಮತ್ತು 22ನೇ ವಾರ್ಡ್ ವ್ಯಾಪ್ತಿಯ ಸದಾಚಾರ ಸಂಹಿತೆಯ ನೋಡಲ್ ಅಧಿಕಾರಿಯಾಗಿ ಪಾಲಿಕೆ ಆಯುಕ್ತರು ಹಾಗೂ ಸದಾಚಾರ ಸಹಾಯಕ ನೋಡಲ್ ಅಧಿಕಾರಿಯಾಗಿ ಸಂಬಂಧಿಸಿದ ವಾರ್ಡ್‌ನ ಕಂದಾಯ ಅಧಿಕಾರಿಗಳು ಮತ್ತು ಸದಾಚಾರ ಸಂಹಿತೆಯ ಅನುಷ್ಠಾನಾಧಿಕಾರಿಯಾಗಿ ಸಂಬಂಧಿಸಿದ ವಾರ್ಡ್‌ನ ಬಿಲ್ ಕಲೆಕ್ಟರ್‌ಗಳನ್ನು ನೇಮಿಸಲಾಗಿದೆ.

**ಮತಗಟ್ಟೆ ಮತ್ತು ಮತದಾರರ ವಿವರ :** ವಾರ್ಡ್ ಸಂಖ್ಯೆ 20 ಮತ್ತು 22 ಸೇರಿ ಒಟ್ಟು 15 ಮತಗಟ್ಟೆಗಳಿದ್ದು, 7638 ಪುರುಷರು ಹಾಗೂ 7443 ಮಹಿಳೆಯರು ಸೇರಿದಂತೆ ಒಟ್ಟು 15081 ಮತದಾರರಿದ್ದಾರೆ.

**ವಿದ್ಯುನ್ಮಾನ ಮತಯಂತ್ರಗಳ ವಿವರ :** ಮತದಾನದ ಉದ್ದೇಶಕ್ಕಾಗಿ 15 ಬಿ.ಯು, 15 ಸಿ.ಯು, ತರಬೇತಿಯ ಉದ್ದೇಶಕ್ಕಾಗಿ 4 ಬಿ.ಯು ಮತ್ತು 4 ಸಿ.ಯು ಗಳನ್ನು ಬಳಸಿಕೊಳ್ಳಲಾಗಿದ್ದು ಹಾಗೂ 6 ಬಿ.ಯು ಮತ್ತು 6 ಸಿ.ಯುಗಳನ್ನು ಕಾಯ್ದಿರಿಸಲಾಗಿದೆ. ಒಟ್ಟಾರೆಯಾಗಿ 25 ಬಿ.ಯು., 25 ಸಿ.ಯುಗಳನ್ನು ಚುನಾವಣೆಗೆ ಉಪಯೋಗಿಸಿಕೊಳ್ಳಲಾಗುತ್ತಿದೆ.

**ಮಸ್ಟರಿಂಗ್ ಮತ್ತು ಡಿ-ಮಸ್ಟರಿಂಗ್ ಸೆಂಟರ್ ಮತ್ತು ಮತ ಎಣಿಕೆ ಕೇಂದ್ರ ವಿವರ :** ಪಿ.ಬಿ. ರಸ್ತೆಯಲ್ಲಿರುವ ಡಿ.ಆರ್.ಆರ್. ವಿದ್ಯಾಸಂಸ್ಥೆಯನ್ನು ಮಸ್ಟರಿಂಗ್, ಡಿ-ಮಸ್ಟರಿಂಗ್ ಹಾಗೂ ಎಣಿಕಾ ಕೇಂದ್ರವಾಗಿ ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

# ಉಕ್ಕಡಗಾತ್ರಿ ಅಜ್ಜಯ್ಯನ ಗರ್ಭಗುಡಿಗೆ ಹಿತ್ತಾಳೆ ಕವಚ ಅಳವಡಿಕೆ



**ಅಜ್ಜಯ್ಯನ ಜಾತ್ರೆಗೆ ಸಿದ್ಧತೆ**

ಮಲೇಬೆನ್ನೂರು, ಮಾ.10- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಮಹಾಶಿವರಾತ್ರಿ ಜಾತ್ರಾ ಮಹೋತ್ಸವವು ಇದೇ ಮಾರ್ಚ್ 13 ರಿಂದ 20 ರವರೆಗೆ ಜರುಗಲಿದೆ.

ಈ ಬಾರಿ ವಿಶೇಷವಾಗಿ ಅಜ್ಜಯ್ಯನ ಗದ್ದುಗೆ ಇರುವ ಗರ್ಭ ಗುಡಿಯ ಗೋಡೆಗಳಿಗೆ ಸುಮಾರು 5 ಲಕ್ಷ ರೂ. ವೆಚ್ಚದಲ್ಲಿ ಹಿತ್ತಾಳೆ ಕವಚವನ್ನು ಅಳವಡಿಸಲಾಗಿದೆ. ಕವಚ ತುಂಬಾ ಆಕರ್ಷಣೀಯ ವಾಗಿದೆ ಎಂದು ಗದ್ದುಗೆ ಟ್ರಸ್ಟ್ ಸಮಿತಿ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

ಕೋವಿಡ್ ಕಾರಣದಿಂದಾಗಿ ಈ ವರ್ಷ ಜಾತ್ರೆಯನ್ನು ಸರಳವಾಗಿ ಹಮ್ಮಿಕೊಂಡಿದ್ದು, 60 ವರ್ಷ ಮೇಲ್ಪಟ್ಟವರನ್ನು ಹಾಗೂ 10 ವರ್ಷದೊಳಗಿನ ಮಕ್ಕಳನ್ನು ಜಾತ್ರೆಗೆ ಕರೆ ತರಬಾರದೆಂದು ಸುರೇಶ್ ಮನವಿ ಮಾಡಿದ್ದಾರೆ.

ಜಾತ್ರೆಗೆ ಅಗತ್ಯ ಸಿದ್ಧತೆಗಳ ಜೊತೆಗೆ ಮುಂಜಾಗ್ರತಾ ಕ್ರಮಗಳನ್ನು ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಕೈಗೊಳ್ಳಲಾಗಿದೆ. ಗ್ರಾ.ಪಂ.ನಿಂದ ಸ್ವಚ್ಛತಾ ಕಾರ್ಯ ನಡೆದಿದ್ದು, ಆರೋಗ್ಯ ಇಲಾಖೆಯಿಂದಲೂ ಮುನ್ನೆಚ್ಚರಿಯನ್ನು ಕೈಗೊಳ್ಳಲಾಗಿದೆ.

# ಪ್ರಧಾನ ಮಂತ್ರಿ ಸ್ವಾಸ್ಥ್ಯ ನಿಧಿಗೆ ಸಂಪುಟದ ಸಮ್ಮತಿ

ನವದೆಹಲಿ, ಮಾ. 10 – ಆರೋಗ್ಯ ಹಾಗೂ ಶಿಕ್ಷಣ ಸೆಸ್ ವಸೂಲಿಯಿಂದ ರೂಪಿಸಲಾಗುವ ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ನಿಧಿ (ಪಿ.ಎಂ.ಎಸ್.ಎಸ್.ಎನ್.) ಸ್ಥಾಪನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಈ ನಿಧಿಯ ವಿಶೇಷವೆಂದರೆ ಇದು ಅವಧಿ ಮೀರುವುದಿಲ್ಲ. ಆರೋಗ್ಯ ಹಾಗೂ ಶಿಕ್ಷಣ ಸೆಸ್ ಅನ್ನು ಈ ನಿಧಿಗೆ ಜಮಾ ಮಾಡಲಾಗುವುದು. ಈ ಹಣವನ್ನು ಆಯುಷ್ಮಾನ್ ಭಾರತ್, ಕ್ಷೇಮ ಕೇಂದ್ರಗಳು, ರಾಷ್ಟ್ರೀಯ ಆರೋಗ್ಯ ಮಿಷನ್, ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಮತ್ತಿತರೆ ಉದ್ದೇಶಗಳಿಗೆ ಬಳಸಬಹುದಾಗಿದೆ. ಪಿ.ಎಂ.ಎಸ್.ಎಸ್.ಎನ್. ನಿರ್ವಹಣೆಯನ್ನು ಆರೋಗ್ಯ ಸಚಿವಾಲಯಕ್ಕೆ ವಹಿಸಲಾಗುವುದು.

# ಹಂಪಿ ಸೇರಿ ನಾಲ್ಕು ಕಡೆ ತಾರಾ ಹೋಟೆಲ್ : ಯೋಗೇಶ್ವರ್

ಬೆಂಗಳೂರು, ಮಾ. 10 - ಪ್ರವಾಸೋದ್ಯಮ ಇಲಾಖೆಯಿಂದ ನಾಲ್ಕು ತ್ರಿಸ್ಟಾರ್ ಹೋಟೆಲ್‌ಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ತಿಳಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ನೀಡಿರುವ ಅವರು, 18 ತಿಂಗ ಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಪ್ರವಾಸಿಗರ ಸೇವೆಗೆ ಹೋಟೆಲ್‌ಗಳನ್ನು ಸಮರ್ಪಿಸಲಾಗುವುದು ಎಂದರು. ವಿಜಯಪುರದಲ್ಲಿ 57, ಬಾದಾಮಿಯಲ್ಲಿ 72, ಹಂಪಿಯಲ್ಲಿ 75-100 ಹಾಗೂ ಬೇಲೂರಿನಲ್ಲಿ 75 ಕೊಠಡಿಗಳ ತ್ರಿಸ್ಟಾರ್ ಹೋಟೆಲ್ ನಿರ್ಮಾಣ ಮಾಡಲಾಗುವುದು ಎಂದವರು ಹೇಳಿದ್ದಾರೆ. ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಮೆ:ರೈಟ್ಸ್ ಸಂಸ್ಥೆ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಮುಂದಿನ ತಿಂಗಳು ನಾಲ್ಕು ಹೋಟೆಲ್‌ಗಳ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸುವುದಾಗಿ ತಿಳಿಸಿದರು.

# ರಾಸಲೀಲೆ ಸಿ.ಡಿ. ಪ್ರಕರಣದ ತನಿಖೆಗೆ ಎಸ್.ಐ.ಟಿ.

ಬೆಂಗಳೂರು, ಮಾ. 10 – ರಾಜಕೀಯ ಸಂಚಲನಕ್ಕೆ ಕಾರಣವಾಗಿರುವ ರಾಸಲೀಲೆ ಸಿ.ಡಿ. ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿದೆ. ಎ.ಡಿ.ಜಿ.ಪಿ. ಸೌಮೇಂದು ಮುಖರ್ಜಿ ಅವರ ನೇತೃತ್ವದಲ್ಲಿ ತಂಡವನ್ನು ರಚಿಸಲಾಗಿದೆ.

ಈ ಬಗ್ಗೆ ಪ್ರಕಟಣೆ ಹೊರಡಿಸಿರುವ ಗೃಹ ಸಚಿವ ಬಸವರಾಜ ಬೊಮ್ಮಾಯಿ, ತಮ್ಮ ವಿರುದ್ಧ ರಾಜಕೀಯ ತೇಜೋವಧೆ ಹಾಗೂ ಮಾನಹಾನಿ ಮಾಡುವ ಉದ್ದೇಶದಿಂದ ಸಿ.ಡಿ. ರೂಪಿಸಲಾಗಿದೆ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಆರೋಪಿಸಿದ್ದಾರೆ. ಹಲವಾರು ಜನ ಷಡ್ಯಂತ್ರ ರೂಪಿಸಿದ್ದಾರೆ ಎಂದು ತಿಳಿಸಿದ್ದಾರೆ ಎಂದು ಪ್ರಸ್ತಾಪಿಸಿದ್ದಾರೆ.

ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುವುದನ್ನೂ ಪ್ರಸ್ತಾಪಿಸಿರುವ ಬೊಮ್ಮಾಯಿ, ಷಡ್ಯಂತ್ರ ರೂಪಿಸಿರುವ ಹಾಗೂ ಇದರ ಹಿಂದಿರುವ ವ್ಯಕ್ತಿಗಳ ಕೂಲಂಕುಶ ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸಿರುವುದಾಗಿ ಹೇಳಿದ್ದಾರೆ. ತನಿಖಾ ತಂಡ ಸಂಪೂರ್ಣ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

# ಸೈನಿಕ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರವೇಶ

ನವದೆಹಲಿ, ಮಾ. 10 – 2021-22ರ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸೈನಿಕ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರವೇಶ ನೀಡುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಪ್ರಸಕ್ತ ದೇಶದಲ್ಲಿ 33 ಸೈನಿಕ ಶಾಲೆಗಳಿವೆ.

ಮಿಜೋರಾಂನ ಛಿಂಗಚಿಪ್ ಸೈನಿಕ ಶಾಲೆಯಲ್ಲಿ ಪ್ರಾಯೋಗಿಕವಾಗಿ ವಿದ್ಯಾರ್ಥಿನಿಯರಿಗೆ ಪ್ರವೇಶ ನೀಡಲಾಗಿತ್ತು. ಮುಂದಿನ ಶೈಕ್ಷಣಿಕ ಸಾಲಿನಿಂದ ಎಲ್ಲ ಸೈನಿಕ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರವೇಶ ನೀಡಲಾಗುವುದು ಎಂದು ರಕ್ಷಣಾ ಖಾತೆ ಅಧೀನ ಸಚಿವ ಶ್ರೀಪಾದ ನಾಯಕ್ ಲೋಕಸಭೆಗೆ ತಿಳಿಸಿದ್ದಾರೆ.

ಸರ್ಕಾರೇತರ ಸಂಘಟನೆಗಳು, ಖಾಸಗಿ ಶಾಲೆಗಳು ಹಾಗೂ ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಸೈನಿಕ ಶಾಲೆಗಳನ್ನು ತೆರೆಯುವ ಹೊಸ ಯೋಜನೆಯನ್ನೂ ಹೊಂದಿರುವುದಾಗಿ ನಾಯಕ್ ತಿಳಿಸಿದ್ದಾರೆ.

# ಶೀಘ್ರ ಕೃಷಿ ಇಲಾಖೆ ಹುದ್ದೆ ಭರ್ತಿ

ಬೆಂಗಳೂರು, ಮಾ. 10 - ಇಲಾಖೆಯಲ್ಲಿನ ಖಾಲಿ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಲಾಗುವುದು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಹೆಚ್.ಡಿ. ರೇವಣ್ಣ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಶೇ. 50 ರಷ್ಟು ಹುದ್ದೆಗಳು ಇಲಾಖೆಯಲ್ಲಿ ಖಾಲಿ ಇವೆ ಎಂದರು.

ಖಾಲಿ ಹುದ್ದೆಗಳ ಭರ್ತಿಗೆ ಹಣಕಾಸು ಹಾಗೂ ಲೋಕಸೇವಾ ಆಯೋಗಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಹುದ್ದೆಗಳು ಖಾಲಿ ಇದ್ದರೂ ಇಲಾಖೆ ಯೋಜನೆಗಳು ರೈತರಿಗೆ ಸೂಕ್ತ ಕಾಲದಲ್ಲಿ ತಲುಪುವಂತೆ ನೋಡಿಕೊಳ್ಳಲಾಗುತ್ತಿದೆ. ಇದೇ ಕಾರಣಕ್ಕಾಗಿ ತಾತ್ಕಾಲಿಕ ನೌಕರರನ್ನು ನೇಮಕ ಮಾಡಿಕೊಂಡಿದ್ದೇವೆ ಎಂದರು.

# ಜಾತಿ ಗಣತಿ ವರದಿ ಬಿಡುಗಡೆ ಇಲ್ಲ

ನವದೆಹಲಿ, ಮಾ. 10 – 2011ರಲ್ಲಿ ನಡೆಸಲಾದ ಜಾತಿ ಗಣತಿಯ ವರದಿ ಬಿಡುಗಡೆ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿಲ್ಲ ಎಂದು ರಾಜ್ಯಸಭೆಗೆ ತಿಳಿಸಲಾಗಿದೆ.

2011ರಲ್ಲಿ ಗ್ರಾಮೀಣಾಭಿವೃದ್ಧಿ ಸಚಿವಾಲಯ ಮತ್ತು ನಗರ ವಸತಿ ಹಾಗೂ ಬಡತನ ನಿವಾರಣೆ ಸಚಿವಾಲಯಗಳು ಸಾಮಾಜಿಕ – ಆರ್ಥಿಕ ಹಾಗೂ ಜಾತಿ ಗಣತಿ ನಡೆಸಿದ್ದವು ಎಂದು ಕೇಂದ್ರ ಗೃಹ ಖಾತೆ ಅಧೀನ ಸಚಿವ ನಿತ್ಯಾನಂದ ರಾಯ್ ತಿಳಿಸಿದ್ದಾರೆ.

ಜಾತಿ ಗಣತಿಯನ್ನು ಅಂತಿಮಗೊಳಿಸಿ, ಪ್ರಕಟಿಸಲಾಗಿದೆ. ರಿಜಿಸ್ಟ್ರಾರ್ ಜನರಲ್ ಕಚೇರಿಗೆ ಮಾಹಿತಿಯನ್ನು ರವಾನಿಸಲಾಗಿದೆ ಎಂದು ರಾಯ್ ತಿಳಿಸಿದ್ದಾರೆ.

WANTED
FULL TIME ACCOUNT ASSISTANT
With Experience in Tally Accounting
Apply with Bio-Data immediately:
SHANTALA
Chamrajpet, Davanagere
96861 95328, 96861 95323




ಮಹಾಶಿವರಾತ್ರಿ ಶುಭಾಶಯಗಳು





ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಯುವ ಮುಖಂಡ ನಿರಂಜನ್ ದೀಟೂರುರವರು ಕುಟುಂಬ ಸಮೇತ ಹರಿಹರದ ಪಂಚಮಸಾಲಿ ಪೀಠದ ಹರ ದೇವಸ್ಥಾನದ ರುದ್ರಾಭಿಷೇಕ ಕಾರ್ಯಕ್ರಮದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಶ್ರೀ ಮಠದಿಂದ ಆಶೀರ್ವಾದ ಪಡೆದರು.

ಮಹಾಶಿವರಾತ್ರಿ ಪ್ರಯುಕ್ತ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಹರ ಪೀಠದಲ್ಲಿ ಹರ ರಾತ್ರಿ ಸಂಭ್ರಮ ಹಾಗೂ ಸಾಮೂಹಿಕ ಇಷ್ಟಲಿಂಗ ಮಹಾಪೂಜೆ ಕಾರ್ಯಕ್ರಮಕ್ಕೆ ಆಗಮಿಸುವ

ಸರ್ವ ಭಕ್ತಾದಿಗಳಿಗೂ ಸ್ವಾಗತ







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte